ಶಿಕ್ಷಣದಿಂದ ಶ್ರೇಷ್ಠತೆ

**ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು (ಸ್ವಾಯತ್ತ)**

ಜಯಲಕ್ಷ್ಮೀಪುರಂ, ಮೈಸೂರು–12

ಶ್ರೇಷ್ಠತೆಯ ಸಾಮರ್ಥ್ಯವುಳ್ಳ ಕಾಲೇಜು

**ಇತಿಹಾಸ ವಿಭಾಗ**

**Dept. of History**

**ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೊಂಡು, ನ್ಯಾಕ್‌ನಿಂದ 'ಎ' ಮಾನ್ಯತೆ ಪಡೆದಿದೆ.**




**ಸಂಚಿಕೆ: 36 ಡಿಸೆಂಬರ್ 2022** | ಪ್ರಧಾನ ಸಂಪಾದಕರು: ಡಾ. ಬಿ.ಆರ್. ಜಯಕುಮಾರಿ, ಪ್ರಾಂಶುಪಾಲರು | **www.mahajana.edu.in** | ಸಂಪಾದಕರು: ಡಾ. ಶ್ರೀಧರ ಹೆಚ್, ಇತಿಹಾಸ ವಿಭಾಗ | **ಪುಟಗಳು: 07**

**ಸಂಪಾದಕೀಯ**

## ಅಜರಾಮರ ಅಜಾತಶತ್ರು
## ದಿ. ಶ್ರೀ ಅಟಲ್ ಬಿಹಾರಿ ವಾಜಪೇಯಿ



ಅಟಲ್ ಬಿಹಾರಿ ವಾಜಪೇಯಿ ಭಾರತದ ಸ್ವಾತಂತ್ರ್ಯೋತ್ತರ ರಾಜಕಾರಣದಲ್ಲಿ ಸದಾ ಹಸಿರು ಹೆಸರು. ನಿಷ್ಕಳಂಕ ಚಾರಿತ್ರ್ಯದ, ಮೇರು ವ್ಯಕ್ತಿತ್ವದ ಮಹಾನ್ ಜನನಾಯಕ, ಅಪ್ರತಿಮ ವಾಗ್ಮಿ, ಅದ್ವಿತೀಯ ಸಂಸತ್‌ಪಟು, ಕವಿ ಹೃದಯದ ಭಾವಜೀವಿ, ಸರ್ವಜನಪ್ರಿಯ ಹಾಗೂ ಬಹುರಂಗಿನ ವ್ಯಕ್ತಿತ್ವದ ಅಪೂರ್ವ ವ್ಯಕ್ತಿ ಭಾರತದ ಪ್ರಧಾನಿ ಸ್ನೇಹಜೀವಿ, ಕರುಣಾಮಯಿ, ಅಜಾತಶತ್ರು ಅಟಲ್‌ಜೀ.

ಗ್ವಾಲಿಯರ್‌ನ ಶಿಂಧೆ ದಂಡು ಪ್ರದೇಶದಲ್ಲಿ ಅಟಲ್‌ಜೀ 1924 ಡಿಸೆಂಬರ್ 25 ರಂದು ಜನಿಸಿದರು. ಅಂದು ಏಸುಕ್ರಿಸ್ತನ ಜನ್ಮದಿನವೂ ಹೌದು. ಅವರ ತಂದೆ ಕೃಷ್ಣ ಬಿಹಾರಿ, ತಾಯಿ ಕೃಷ್ಣಾದೇವಿ. ಅಟಲ್‌ಜೀ ಬಾಲ್ಯದಿಂದಲೇ ಸಾಹಸಪ್ರಿಯ, ಬುದ್ಧಿವಂತ, ಅಭಿರುಚಿ ಹೊಂದಿದವರಾಗಿದ್ದರು.

ಅಟಲ್‌ಜೀಯವರು ಸ್ವಗ್ರಾಮದಲ್ಲಿ ಪ್ರಾಥಮಿಕ ಶಿಕ್ಷಣ ಪಡೆದರು. ಮುಂದೆ ಗ್ವಾಲಿಯರ್‌ನ ಗೋರಖಿ ವಿದ್ಯಾಲಯದಲ್ಲಿ ಮಿಡಲ್ ಪರೀಕ್ಷೆ ಪಾಸು ಮಾಡಿದರು. ಅಭ್ಯಾಸದಲ್ಲಿ ಅವರು ಯಾವತ್ತೂ ಮುಂದೆ ಇರುತ್ತಿದ್ದರು. ತಮ್ಮ ಜಾಣತನದ ಮಾತು ಹಾಗೂ ನಡವಳಿಕೆಯಿಂದ ಎಲ್ಲರ ಪ್ರೀತಿಗೆ ಪಾತ್ರವಾಗಿದ್ದ ಅಟಲ್ ಶಾಲಾ ಪಠ್ಯಪುಸ್ತಕಗಳಿಗಿಂತ ಆಧ್ಯಾತ್ಮ, ಪೌರಾಣಿಕ, ಭಾಗವತ, ರಾಮಾಯಣ, ಮಹಾಭಾರತ, ಕಾದಂಬರಿ, ಕತೆ ಮುಂತಾದ ಪುಸ್ತಕಗಳ ಓದಿನಲ್ಲಿ ಅವರಿಗೆ ಹೆಚ್ಚು ಆಸಕ್ತಿ. ಜೊತೆಗೆ ಕಬಡ್ಡಿ ಎಂದರೆ ಅತಿ ಇಷ್ಟವಾದ ಆಟ. ಅಟಲ್‌ಜೀ ಸ್ಕೂಲ್ ದಿನಗಳಿಂದಲೂ ಉತ್ತಮ ಭಾಷಣಕಾರರಾಗಿದ್ದರು. ಅವರ ಮಾತುಗಳನ್ನು ಕೇಳಲು ಚೆಂದ. ಅಟಲ್‌ಜೀ ಮಾತು:

ಹಿಂದೆಂದೂ ಕಾಣದಂತಹ ರಾಜಕೀಯ
ಮಹಾನ್‌ರಲ್ಲಿ ಪ್ರಾಮಾಣಿಕ,
ಸಂಯಮಶೀಲತೆ ಹಾಗೂ ತಮ್ಮ
ಅದ್ಭುತ ವಾಕ್‌ಚಾತುರ್ಯದಿಂದ
ಭಾರತೀಯ ಜನಮನದಲ್ಲಿ
ಹಾಸು ಹೊಕ್ಕಾಗಿ ಹಸಿರಾಗಿ ಉಳಿದ
ಭಾರತದ ಮಾಜಿ ಪ್ರಧಾನಮಂತ್ರಿ
ಅಟಲ್ ಬಿಹಾರಿ ವಾಜಪೇಯಿ

ಗ್ವಾಲಿಯರ್‌ನ ವಿಕ್ಟೋರಿಯಾ ಕಾಲೇಜು ಸೇರಿ ಅಲ್ಲಿ ಬಿ.ಎ. ಪಾಸ್ ಮಾಡಿದರು. ಮುಂದೆ ಗ್ವಾಲಿಯರ್‌ನಲ್ಲಿ ಎಂ.ಎ. ಪಾಸು ಮಾಡಿದರು. ಮುಂದೆ ಅವರು ಕಾನ್ಪುರದ ಡಿಎವಿ ಕಾಲೇಜಿನಲ್ಲಿ ಕಾನೂನು ಪದವಿ ಅಪೂರ್ಣಗೊಳಿಸಿದರು.

ಅವರು ಮುಂದೆ ಸ್ವಾತಂತ್ರ್ಯಕ್ಕೋಸ್ಕರ ಹೋರಾಡುವ ಗಾಂಧೀಜಿ, ಸುಭಾಷ್‌ಚಂದ್ರ ಬೋಸ್, ನೆಹರೂ, ಲಾಲ್ ಬಹದ್ದೂರ್ ಶಾಸ್ತ್ರಿ,

**ಪು.ತಿ.ನೋ.**



ಮೊರಾರ್ಜಿ ಮುಂತಾದ ಗಣ್ಯ ವ್ಯಕ್ತಿಗಳ ಜೊತೆಗೂಡಿ ಹೋರಾಡಿದ ಧೀರ ಎನ್ನಬಹುದು.

ಅಟಲ್‌ಜೀಯವರು ದೇಶದ ನಾಯಕರಾಗಿ ಮುನ್ನಡೆದರು. ಅವರು ಎಂಥದೇ ಸಂದರ್ಭವಿರಲಿ ಅವರ ನಡೆ, ನುಡಿ, ವಿಚಾರ ಹಾಗೂ ನಡವಳಿಕೆ ಆದರ್ಶಪ್ರಾಯವಾದದ್ದು. ಅವರು ಇತರರಿಗೆ ಒಂದು ಅಗ್ರ ಪಂಕ್ತಿಯನ್ನು ಹಾಕಿಕೊಡುತ್ತಾರೆ. ನನ್ನ ಜೀವನದ ಉದ್ದೇಶ ಎಲ್ಲಾ ಕ್ಷೇತ್ರಗಳಲ್ಲಿ ನಿಷ್ಠೆಯಿಂದ ನನ್ನ ಪಾತ್ರ ನಿರ್ವಹಿಸುವುದು ಭಾರತದೇಶವನ್ನು ವಿಶ್ವದ ಶ್ರೇಷ್ಠ ಶಕ್ತಿಯಾಗುವುದನ್ನು ನೋಡುವುದು ನನ್ನಧ್ಯೇಯವಾಗಿದೆ ಎಂದು ನುಡಿಯುತ್ತಾರೆ.

**ಅಟಲ್‌ಜೀಯವರ ಮಹತ್ವದ ಘಟನೆಗಳು ಈ ಕೆಳಗಿನಂತಿವೆ.**

- 1942 – ಜನ ಸಂಘದ ಸ್ಥಾಪಕ ಸದಸ್ಯ
- 1957 – ಮೊದಲ ಬಾರಿಗೆ ಲೋಕಸಭಾ ಸದಸ್ಯರಾಗಿ ಆಯ್ಕೆ
- 1966 – ಸರ್ಕಾರಿ ಭರವಸೆಗಳ ಸಮಿತಿಯ ಅಧ್ಯಕ್ಷ, ಕೆನಡಾದಲ್ಲಿ ನಡೆದ ಕಾಮನ್ ವೆಲ್ತ್ ಸಂಸದೀಯ ಸಂಘದ ಸಭೆಯಲ್ಲಿ ಭಾಗವಹಿಸಿದ್ದರು.
- 1967 – ಆಸ್ಟ್ರೇಲಿಯಾಗೆ ಭೇಟಿ ನೀಡಿದ ಸಂಸದೀಯ ನಿಯೋಗದ ಸದಸ್ಯ.
- 1968 – ಪಂಡಿತ ದೀನದಯಾಳ್ ಉಪಾಧ್ಯಾಯ ಸ್ಮಾರಕ ಅಧ್ಯಕ್ಷರಾಗಿದ್ದರು. ಭಾರತೀಯ ಜನ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದರು.
- 1975 – ತುರ್ತು ಪರಿಸ್ಥಿತಿ ಅವಧಿಯಲ್ಲಿ ಬಂಧನ
- 1977 – ಜನತಾ ಪಕ್ಷದ ಸ್ಥಾಪಕರಲ್ಲಿ ಒಬ್ಬರು. ಭಾತದ ವಿದೇಶಾಂಗ ಮಂತ್ರಿ
- 1980 – ಜಾಂಬಿಯಾಕ್ಕೆ ಭೇಟಿ, ಬಿಜೆಪಿ ಸಂಸದೀಯ ಪಕ್ಷದ ನಾಯಕ
- 1992 – ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ, ಪದ್ಮವಿಭೂಷಣ ಪುರಸ್ಕಾರ
- 1996 – 13 ದಿನಗಳ ಭಾರತದ ಪ್ರಧಾನಿಯಾಗಿ ಕಾರ್ಯ
- 1997 – 2ನೇ ಬಾರಿ ಭಾರತದ ಪ್ರಧಾನಿಯಾಗಿ, ಪ್ರಾಮಾಣಿಕ ವ್ಯಕ್ತಿ ಪ್ರಶಸ್ತಿ
- 1998 – 3ನೇ ಬಾರಿ ಪೂರ್ಣ ಪ್ರಮಾಣದ ಪ್ರಧಾನಿಯಾಗಿ
- 2015 – ಭಾರತರತ್ನ ಪ್ರಶಸ್ತಿ

ಅಟಲ್‌ಜೀಯವರು ಪತ್ರಕರ್ತರಾಗಿ ಕಾರ್ಯ, ರಾಷ್ಟ್ರಧರ್ಮ, ಸ್ವದೇಶಚೇತನ, ಪಾಂಚಜನ್ಯ, ವೀರ ಅರ್ಜುನ ಪತ್ರಿಕೆಗಳ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದಾರೆ. ಅಸ್ಪೃಶತಾ ನಿವಾರಣೆ, ಜಾತೀಯತೆ ನಿರ್ಮೂಲನೆ ಮತ್ತು ಮಹಿಳಾ ಕಲ್ಯಾಣದ ಸಂಘಟನೆಗಳಲ್ಲಿ ಸಾಮಾಜಿಕ ಚಟುವಟಿಕೆಗಳು ಮಾಡಿದ್ದಾರೆ.

ಅಲ್ಲದೆ ಅಮರ ಬಲಿದಾನ, ಸಂಸದ ಮೇಲೇನ್ ದಶಕದ ನಂತರ ಅನೇಕ ಕೃತಿಗಳು ರಚಿಸಿದ್ದಾರೆ. ಅಟಲ್‌ಜಿಯವರು ಅನೇಕ ಕವನಗಳು ಬರೆದಿದ್ದಾರೆ. ಅವುಗಳಲ್ಲಿ ಈ ಎರಡು ಕವನ ನುಡಿಗಳು ಇಲ್ಲಿದೆ.

'ಮನುಷ್ಯನ ಗುರು ಧನ-ಸಿಂಹಾಸನದಿಂದಾಗದು ಬರೀ ಮನದಿಂದ ಮನ ದಾರಿದ್ರ್ಯವಿದ್ದರೆ ಕುಬೇರನ ಸಂಪತ್ತೂ ಅಳಿಯುತ್ತದೆ.'

ನನಗೆ ದೂರದಲ್ಲಿರುವುದು ಕಾಣಿಸುತ್ತದೆ, ಗೋಡೆಯ ಮೇಲೆ ಬರೆದಿದ್ದನ್ನು ಓದಬಲ್ಲೆ ಆದರೆ ನನ್ನ ಕೈ ಮೇಲಿನ ಗೆರೆಗಳನ್ನು ಮಾತ್ರ ಎಣಿಸಲಾರೆ.

ಭಾರತದ ಅಪರೂಪದ ಮುತ್ಸದ್ದಿ ಅಟಲ್ ಬಿಹಾರಿ ವಾಜಪೇಯಿ. ಈ ದೇಶದ ಸಾರ್ವಜನಿಕ ಜೀವನಕ್ಕೆ ಅಟಲ್‌ಜೀ ಭಿತ್ತಿದ ಆದರ್ಶ ಅನನ್ಯ. ದೇಶದರಾಜಕೀಯ ನಾಯಕರ ಪೈಕಿ ಮಂದಿ ಒಂದಿಲ್ಲೊಂದು ಹಗರಣ, ಕರ್ಮಕಾಂಡದಲ್ಲಿ ಸಿಲುಕಿ ಒದ್ದಾಡುತ್ತಿದ್ದಾರೆ.

ಅಟಲ್‌ಜೀ ಮಾತ್ರ ಯಾವುದೇ ಹಗರಣ, ಆರೋಪಗಳಲ್ಲೂ, ಸಿಲುಕದೇ 'ಶುಭ್ರರಾಗಿ' ಕಾಣುತ್ತಾರೆ. ಅಟಲ್‌ಜೀ ಪ್ರಧಾನಿಯಾಗಿ ಚೀನಾ, ಅಮೆರಿಕಾ, ರಷ್ಯಾ, ಜಪಾನ್, ಪಾಕಿಸ್ತಾನ ಇನ್ನೂ ಅನೇಕ ದೇಶಗಳ ಪ್ರವಾಸ ಗೈದು ದೇಶವನ್ನು ಉನ್ನತ ಮಟ್ಟಕ್ಕೇರಿಸಲು ಸತತ ಪ್ರಯತ್ನಪಟ್ಟಿದ್ದಾರೆ.

ಹಿಂದೆ ಪಾಕಿಸ್ತಾನಕ್ಕೆ ಭೇಟಿಕೊಟ್ಟು ಪಾಕಿಸ್ತಾನ-ಭಾರತದ ಸಂಬಂಧ ಬೆಳೆಸಲು ದೆಹಲಿ ಲಾಹೋರ್ ಬಸ್ಸನ್ನು ಪ್ರಾರಂಭಿಸಿದರು ಹಾಗೂ ಅಣು ಪರೀಕ್ಷೆ ಮಾಡಿಸಿದವರು ಅವರೊಬ್ಬ ಕಳಂಕ ರಹಿತ ರಾಜಕಾರಣಿ, ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಈ ರಾಷ್ಟ್ರದ ಜನಮಾನಸದೊಂದಿಗೆ ಅವರು ಗುರುತಿಸಿ ಕೊಂಡಿದ್ದಾರೆ. ಹಾಗಾಗಿ ನಿಜಕ್ಕೂ ಇವರೊಬ್ಬ 'ಅಜಾತ ಶತ್ರು' ಎನ್ನಲು ಅನುಮಾನವಿಲ್ಲ.

**– ಡಾ. ಶ್ರೀಧರ ಹೆಚ್.**
ಮುಖ್ಯಸ್ಥರು, ಇತಿಹಾಸ ವಿಭಾಗ





## “ಆಧುನಿಕ ಮೈಸೂರು ನಿರ್ಮಾಣದಲ್ಲಿ ವಿಶ್ವೇಶ್ವರಯ್ಯನವರ ಪಾತ್ರ”

### ಸಂವಾದ ಕಾರ್ಯಕ್ರಮ ವರದಿ

SBRR ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ದಿನಾಂಕ: 23/12/2022 ರಂದು ಇತಿಹಾಸ ವಿಭಾಗ ಮತ್ತು IQAC ಸಹಯೋಗದೊಂದಿಗೆ ಮಧ್ಯಾಹ್ನ 2.30ಕ್ಕೆ AVC-I ರಲ್ಲಿ ಸಂವಾದ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ ಅವರು ವಹಿಸಿಕೊಂಡಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಇತಿಹಾಸ ವಿಷಯದ ನಿವೃತ್ತ ಪ್ರಾಧ್ಯಾಪಕರಾದ ಶ್ರೀಯುತ ಭೈರೇಗೌಡ ಅವರು ಆಗಮಿಸಿದ್ದರು. ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥರಾದ ಶ್ರೀಯುತ ಡಾ. ಶ್ರೀಧರ ಹೆಚ್. ಮತ್ತು ಸಹಾಯಕ ಪ್ರಾಧ್ಯಾಪಕರಾದ ಶ್ರೀಯುತ ನಂದೀಶ್ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು ಹಾಗೂ ಎಲ್ಲಾ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಈ ಕಾರ್ಯಕ್ರಮದಲ್ಲಿ ತುಂಬಾ ಕುತೂಹಲದಿಂದ ವಿಷಯವನ್ನು ಕೇಳಿಸಿಕೊಂಡು ಪ್ರಶ್ನೆಗಳನ್ನು ಕೇಳುತ್ತಿದ್ದರು.

ಈ ಕಾರ್ಯಕ್ರಮದ ಸ್ವಾಗತ ಭಾಷಣವನ್ನುಇತಿಹಾಸ ವಿಭಾಗದ ಮುಖ್ಯಸ್ಥರಾದ ಡಾ. ಶ್ರೀಧರ ಹೆಚ್. ಅವರು ನಡೆಸಿಕೊಟ್ಟರು. ಅಧ್ಯಕ್ಷರ ಭಾಷಣ ನಂತರ ಮುಖ್ಯ ಅತಿಥಿಗಳು ವಿಷಯವನ್ನು ಕುರಿತು ಮಧ್ಯಾಹ್ನ 2.45ರಲ್ಲಿ ಉಪನ್ಯಾಸ ನೀಡಿದರು.

**ಸರ್ ಎಂ.ವಿಶ್ವೇಶ್ವರಯ್ಯ:**

ಜನನ: ಸೆಪ್ಟೆಂಬರ್ 15, 1860 ರಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿ.

ತಂದೆ: ಶ್ರೀನಿವಾಸ ಶಾಸ್ತ್ರಿ, ತಾಯಿ: ವೆಂಕಟಲಕ್ಷ್ಮಮ್ಮ

ಶ್ರೀನಿವಾಸಶಾಸ್ತ್ರಿಗಳು ಸಂಸ್ಕೃತ ವಿದ್ವಾಂಸರಾಗಿದ್ದರು ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ಅಪಾರವಾದ ಪಾಂಡಿತ್ಯವನ್ನು ಪಡೆದುಕೊಂಡಿದ್ದರು. ಅವರ ತಂದೆಯವರಿಗೆ ಇಬ್ಬರು ಹೆಂಡತಿಯರು ಇದ್ದರು. ಎರಡನೆಯ ಹೆಂಡತಿಯ ಮಗನಾಗಿ ಸರ್ ಎಂ.ವಿಶ್ವೇಶ್ವರಯ್ಯನವರು ಜನಿಸಿದ್ದರು. ಒಟ್ಟು 6 ಜನ ಮಕ್ಕಳು. 4 ಗಂಡು, 2 ಹೆಣ್ಣು. ವಿಶ್ವೇಶ್ವರಯ್ಯನವರು ಎರಡನೆಯ ಮಗನಾಗಿ ಜನಿಸಿದರು.

**ಬಾಲ್ಯ:**

ವಿಶ್ವೇಶ್ವರಯ್ಯನವರು 15 ವರ್ಷ ವಯಸ್ಸಿನವರಾಗಿದ್ದಾಗ ಅವರ ತಂದೆಯವರು ಮರಣ ಹೊಂದಿದರು. ಇದರಿಂದ ಅವರ ಕುಟುಂಬದ ನಿರ್ವಹಣೆಗೆ ಅಪಾರವಾದ ಸಂಕಷ್ಟವನ್ನು ಪಟ್ಟರು. ತನ್ನ ತಾಯಿಯವರು ಪಡುತ್ತಿದ್ದ ಕಷ್ಟವನ್ನು ಕಂಡು ಅತಿ ಹೆಚ್ಚು ಮನನೊಂದು ಅವರು ‘ಕಲಿಕೆಯ ಜೊತೆಯಲ್ಲಿ ಗಳಿಕೆ’ ಎಂಬ ಸಿದ್ಧಾಂತವನ್ನು ಅನುಸರಿಸಿದ್ದರು. ಇದನ್ನು ಅವರ ಧ್ಯೇಯವಾಗಿ ಮಾಡಿಕೊಂಡಿದ್ದರು. ತನ್ನ ಓದಿನ ಜೊತೆಗೆ ಕೆಲಸವನ್ನು ಮಾಡಿ ಹಣವನ್ನು ತಾಯಿಯವರಿಗೆ ನೀಡುತ್ತಿದ್ದರು.

**ವಿದ್ಯಾಭ್ಯಾಸ:**

ವಿಶ್ವೇಶ್ವರಯ್ಯನವರು ಪ್ರಾಥಮಿಕ ಶಿಕ್ಷಣವನ್ನು ಚಿಕ್ಕಬಳ್ಳಾಪುರದಲ್ಲಿ ಮಾಡಿದ್ದರು. ನಂತರ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ತಮ್ಮ ‘ಮಾವನವರಾದ ಹೆಚ್.ರಾಮಯ್ಯ’ ನವರ ಮನೆಗೆ ತೆರಳಿದ್ದರು.

ಎಸ್.ಎಸ್.ಎಲ್.ಸಿ. ಪರೀಕ್ಷೆಯ ಶುಲ್ಕವನ್ನು ಪಾವತಿಸಲು ಹಣವಿಲ್ಲದೆ 55 ಕಿ.ಮೀ. ಕಾಲುನಡಿಗೆಯಲ್ಲಿ ಪ್ರಯಾಣ ಮಾಡಿ ತನ್ನ ತಾಯಿಯವರಿಂದ ಹಣವನ್ನು ಪಡೆದು ನಂತರ ಪರೀಕ್ಷೆಯ ಶುಲ್ಕವನ್ನು ಪಾವತಿಸಿದರು. ಪ್ರಥಮ ಸ್ಥಾನದಲ್ಲಿ ತೇರ್ಗಡೆ ಹೊಂದಿದರು. ಅವರು ಅತಿ ಹೆಚ್ಚು ಅಂಕಗಳನ್ನು ಪಡೆದುಕೊಂಡು ಉತ್ತೀರ್ಣರಾದುದನ್ನು ಕಂಡು ಬಂಧುಮಿತ್ರರು, ಕುಟುಂಬವರ್ಗದವರು ಅತಿ ಹೆಚ್ಚು ಸಂತೋಷವನ್ನು ಪಟ್ಟರು.



ಸರ್ ಎಂ.ವಿಶ್ವೇಶ್ವರಯ್ಯನವರು 1881ರಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯದಿಂದ ಓದಿ ಪದವಿಯನ್ನು ಪಡೆದುಕೊಂಡರು. ನಂತರ ಪುಣೆಯ ವಿಜ್ಞಾನ ಕಾಲೇಜಿನಿಂದ ಸಿವಿಲ್ ಎಂಜಿನಿಯರಿಂಗ್ ಪದವಿಯನ್ನು ಪಡೆದುಕೊಂಡರು. ಮುಂಬಯಿ ನಗರದಲ್ಲಿ ಲೋಕೋಪಯೋಗಿ ಇಲಾಖೆಯನ್ನು ಸೇರಿದರು. 1884ರಲ್ಲಿ ಭಾರತೀಯ ನೀರಾವರಿ ಆಯೋಗದಿಂದ ಅವರಿಗೆ ಆಮಂತ್ರಣ ಬಂದಿತು. ದಖ್ಖನ್ ಪ್ರಸ್ಥಭೂಮಿಯಲ್ಲೆ ಉತ್ತಮವಾದ ನೀರಾವರಿ ವ್ಯವಸ್ಥೆಯನ್ನು ವಿಶ್ವೇಶ್ವರಯ್ಯನವರು ಪರಿಚಯಿಸಿದ್ದರು. 1907 ರವರೆಗೆ ಮುಂಬಯಿ ಸರ್ಕಾರದಲ್ಲಿ ಸೇವೆಯನ್ನು ಸಲ್ಲಿಸಿ ಸ್ವಯಂ ನಿವೃತ್ತಿ ಪಡೆದುಕೊಂಡರು.

ಇಡೀ ಭಾರತದಲ್ಲಿ ತಮ್ಮ ಪ್ರತಿಭೆಯಿಂದ ಕಾರ್ಯವನ್ನು ಮಾಡುತ್ತಾ ಬಂದರು. ತಮಗೆ ನೀಡಿದ 'ಕೈಸರ್ ಎ ಹಿಂದ್' ಪ್ರಶಸ್ತಿಯನ್ನು ತಿರಸ್ಕರಿಸಿದ್ದರು. ತನ್ನ ಸ್ವಾಭಿಮಾನಕ್ಕೆ ಧಕ್ಕೆತರುವ ಜಾಗದಲ್ಲಿ ನಾನು ಒಂದುಕ್ಷಣವೂ ಇರುವುದಿಲ್ಲ ಎಂದು ಹೇಳಿದರು.

ಪುಣೆ, ಕೊಲ್ಲಾಪುರ, ಸೋಲಾಪುರ, ವಿಜಯಪುರ ಮತ್ತು ಧಾರವಾಡ ನಗರಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಒಳಚರಂಡಿಯ ವ್ಯವಸ್ಥೆಯನ್ನು ತುಂಬಾ ಉತ್ತಮವಾಗಿ ಮಾಡಿಕೊಟ್ಟರು. 1911ರಲ್ಲಿ ಬ್ರಿಟಿಷರು ಕೋಲ್ಕತ್ತದಿಂದ ದೆಹಲಿಗೆ ರಾಜಧಾನಿಯನ್ನು ವರ್ಗಾವಣೆ ಮಾಡಿದಾಗ ಇವರ ಸಲಹೆ ಮತ್ತು ಸೂಚನೆಯನ್ನು ಪಡೆದುಕೊಂಡರು.

**ಮೈಸೂರಿನ ದಿವಾನರಾಗಿ ವಿಶ್ವೇಶ್ವರಯ್ಯ [1912–1918]**

ಮೈಸೂರಿನ ಮುಖ್ಯ ಇಂಜಿನಿಯರ್ ಆಗಿ ಕಾರ್ಯವನ್ನು ಮಾಡುತ್ತಿದ್ದ ಇವರನ್ನು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ದಿವಾನರಾಗಿ ನೇಮಕ ಮಾಡಿಕೊಂಡರು. 1912 ರಿಂದ 1918 ರವರೆಗೆ ದಕ್ಷವಾಗಿ ಆಡಳಿತವನ್ನು ನಡೆಸಿದರು.

1913ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಸ್ಥಾಪನೆ ಮತ್ತು ಕೃಷಿಯಲ್ಲಿ ಸಂಶೋಧನೆಗಾಗಿ GKVKಯನ್ನು ಸ್ಥಾಪಿಸಿದ್ದರು. 1916ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಕಾರಣಕರ್ತರಾದರು. ಮೈಸೂರಿನಿಂದ ಕೊಡಗಿಗೆ ರೈಲ್ವೆ ಮಾರ್ಗವನ್ನು ಮಾಡುವ ಪರಿಕಲ್ಪನೆಯನ್ನು ವಿಶ್ವೇಶ್ವರಯ್ಯನವರು ಮಾಡಿದ್ದರು. ನಮ್ಮರಾಷ್ಟ್ರದ ನೈಸರ್ಗಿಕ ಸಂಪನ್ಮೂಲವು ಅತಿ ಹೆಚ್ಚಿನ ಪ್ರಮಾಣದಲ್ಲಿ ಇದೆ. ಅದನ್ನು ಸದುಪಯೋಗಪಡಿಸಿಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಶರಾವತಿ ಜಲವಿದ್ಯುತ್ ಹೈಡ್ರೋ ಎಲೆಕ್ಟ್ರಿಕ್ ಸಿಟಿ ಸ್ಥಾಪನೆ. 1918ರಲ್ಲಿ ಬೆಂಕಿಪುರ (ಭದ್ರಾವತಿ) ಯಲ್ಲಿ ಕಬ್ಬಿಣ ಕಾರ್ಖಾನೆಯನ್ನು ಸ್ಥಾಪನೆ ಮಾಡಲಾಯಿತು. ಅಲ್ಲಿ ಸಿಗುವ ಕಬ್ಬಿಣದ ಅದಿರನ್ನು ಸಮರ್ಥವಾಗಿ ಬಳಸಿಕೊಂಡು ಅದರಿಂದ ರಾಜ್ಯವು ಅತಿ ಹೆಚ್ಚು ಅಭಿವೃದ್ಧಿಯನ್ನು ಹೊಂದಲು ಇದು ಪ್ರಮುಖವಾದ ಪಾತ್ರವನ್ನು ವಹಿಸಿತ್ತು.

"ರಾಮ ಮನೋಹರ ಲೋಹಿಯಾ" ಅವರು ವಿಶ್ವೇಶ್ವರಯ್ಯನವರನ್ನು "ಭಾಗ್ಯಶಿಲ್ಪಿ" ಎಂದು ಕರೆದಿದ್ದಾರೆ. ವಿಶ್ವೇಶ್ವರಯ್ಯನವರ ಕೆಲಸವನ್ನು ನೋಡಿದಂತಹ ಟಿ.ಪಿ.ಕೈಲಾಸಂ ಅವರ ತಂದೆ ಪರಮಶಿವ ಐಯ್ಯರ್ ಅವರು ವಿಶ್ವೇಶ್ವರಯ್ಯನವರು ರಾಜ್ಯದ ಸಂಪತ್ತನ್ನು ವ್ಯರ್ಥ ಮಾಡುತ್ತಿದ್ದಾರೆ ಎಂದು 1928 ರಲ್ಲಿ ಗಾಂಧೀಜಿಯವರ ಬಳಿಗೆ ಬಂದು ದೂರನ್ನು ನೀಡಿದ್ದರು. (ಗಾಂಧೀಜಿ ನಂದಿ ಬೆಟ್ಟಕ್ಕೆ ವಿಶ್ರಾಂತಿಗಾಗಿ 1928 ರಲ್ಲಿ ಬಂದಿದ್ದರು) ಆದರೆ ಗಾಂಧೀಜಿ ವಿಶ್ವೇಶ್ವರಯ್ಯನವರ ಕಾರ್ಯ ಸಾಧನೆಯನ್ನು ಕೊಂಡಾಡಿದರು.

'ಕೈಗಾರಿಕೀಕರಣ ಇಲ್ಲವೇ ವಿನಾಶ' ಎಂಬುದು ವಿಶ್ವೇಶ್ವರಯ್ಯನವರ ನೀತಿಯಾಗಿತ್ತು.

**ಕೆ.ಆರ್.ಎಸ್. ನಿರ್ಮಾಣ ಕಾರ್ಯ:**

ಕೃಷ್ಣರಾಜ ಸಾಗರ ಅಣೆಕಟ್ಟೆ ನಿರ್ಮಾಣ ಕಾರ್ಯದಲ್ಲಿ ಪ್ರಮುಖವಾದ ಪತ್ರವನ್ನು ವಹಿಸಿದ್ದಾರೆ. 1911 ರಿಂದ 1931 ರವರೆಗೆ ನಡೆಯಿತು. ಡ್ಯಾಮ್‌ನ ತಳಪಾಯವು 111 ಅಡಿ ವಿಸ್ತೀರ್ಣವನ್ನು ಹೊಂದಿದೆ ಮತ್ತು ಡ್ಯಾಮ್‌ನ ಮೇಲ್ಭಾಗದಲ್ಲಿ 14.5 ಅಡಿ ಅಗಲ ಅಳತೆಯ ರಸ್ತೆಯನ್ನು ನೋಡಬಹುದಾಗಿದೆ. 124.8 ಅಡಿ ಎತ್ತರವಿದೆ. ಕೃಷ್ಣರಾಜ ಸಾಗರ ಅಣೆಕಟ್ಟೆ ನಿರ್ಮಾಣ ವೆಚ್ಚ 2½ ಕೋಟಿ ಆಗಿತ್ತು. 14ನೇ ಏಪ್ರಿಲ್ 1962 ರಂದು ವಿಶ್ವೇಶ್ವರಯ್ಯನವರು ನವದೆಹಲಿಯಲ್ಲಿ ಮರಣ ಹೊಂದಿದರು.

♦ ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗ ಬ್ರಿಟಿಷ್ ಸರ್ಕಾರ ಅವರಿಗೆ 'ಸರ್' ಪದವಿಯನ್ನು ನೀಡಿತು.

♦ 1955 ರಲ್ಲಿ ಭಾರತರತ್ನ ಪ್ರಶಸ್ತಿ ಪಡೆದರು.

♦ ಕರ್ನಾಟಕದಲ್ಲಿ ಶಾಲಾ ಕಾಲೇಜುಗಳಿಗೆ ಐಟಿಐ ಪಾಲಿಟೆಕ್ನಿಕ್, ಇಂಜಿನಿಯರ್ ಕಾಲೇಜುಗಳಿಗೆ ಇವರ ಹೆಸರಿಟ್ಟು ಗೌರವಿಸಲಾಗಿದೆ.

♦ ಇಂಜಿನಿಯರ್ ಕ್ಷೇತ್ರದಲ್ಲಿ ಇವರು ಸಲ್ಲಿಸಿರುವ ಅಪಾರ ಸೇವೆಯ ಸ್ಮರಣೆಯಿಂದ ಇವರ ಜನ್ಮ ದಿನವನ್ನು ಪ್ರತಿವರ್ಷಇಂಜಿನಿಯರ್ಸ್ ದಿನವಾಗಿ ಆಚರಿಸಲಾಗುತ್ತದೆ.

**– ನಾಗರಾಜು ಎಸ್.**

ಅಂತಿಮ ಬಿ.ಎ. ವಿದ್ಯಾರ್ಥಿ



***Department of History & IQAC* organised - 23.12.2022**

**Interactive Session on *'Diwan Sir M Vishweshwaraiah Architect of Modern Mysuru'***

Resource Person: **Sri Byregowda,** Retd. Associate Professor, Dept. of History, Adichunchanagiri First Grade College, Nagamangala, Mandya District.



**Departments of History, Journalism and Mass Communication & IQAC Jointly Organises One Day Workshop for Final Year BA, B.Sc & BCA Students on Interview, Grooming Personality & Skill Development - 28.12.2022**







## Departments of History, Journalism and Mass Communication & IQAC Jointly Organises One Day Workshop on "Role of Newspapers During Pre-Independent Era" - 15.11.2022





# ಪತ್ರಿಕೆ ಓದಿನಿಂದ ಸ್ಪರ್ಧಾ ಪರೀಕ್ಷೆ ಎದುರಿಸಲು ಸಾಧ್ಯ

ಸಂ.ಕ. ಸಮಾಚಾರ ಮೈಸೂರು

ಪತ್ರಿಕೆಗಳು ಎಂದೆಂದಿಗೂ ನಿರಂತರ. ವಿದ್ಯಾರ್ಥಿಗಳು ಪತ್ರಿಕೆಗಳನ್ನು, ನಿಯತಕಾಲಿಕೆಗಳನ್ನು ಪ್ರತಿದಿನ ಓದುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು ಎಂದು ಜಯಲಕ್ಷ್ಮಿಪುರಂ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ರಾಚಾರ್ಯರಾದ ಡಾ.ಬಿ.ಆರ್. ಜಯಕುಮಾರಿ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ಮತ್ತು ಪತ್ರಿಕೋದ್ಯಮ ವಿಭಾಗಗಳು ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ಏರ್ಪಡಿಸಿದ್ದ ಸ್ವಾತಂತ್ರ್ಯ ಪೂರ್ವದಲ್ಲಿ ವೃತ್ತ ಪತ್ರಿಕೆಗಳ ಪಾತ್ರ, ಕುರಿತ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ವೃತ್ತ ಪತ್ರಿಕೆಗಳನ್ನು ಓದುವುದರಿಂದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಹಾಗೂ ಜ್ಞಾನವನ್ನು ವೃದ್ಧಿಸಲು ಸಹಕಾರಿಯಾಗಿವೆ. ಇಂದು ವಿದ್ಯಾರ್ಥಿಗಳು ಮೊಬೈಲ್ ಹಾಗೂ ಸಾಮಾಜಿಕ ಜಾಲತಾಣಗಳಿಗೆ ಮೊರೆಹೋಗಿದ್ದಾರೆ. ಇದರಿಂದ ಅನಾನುಕೂಲಗಳೇ ಹೆಚ್ಚು ಎಂದು ಬೇಸರಿಸಿದರು.

ಬಳಿಕ ನಮ್ಮ ಕಾಲೇಜಿನ ಗ್ರಂಥಾಲಯಕ್ಕೆ ಬಹಳಷ್ಟು ವೈವಿಧ್ಯಮಯ ನಿಯತಕಾಲಿಕೆಗಳು, ಪತ್ರಿಕೆಗಳು ಹಾಗೂ ಪುಸ್ತಕಗಳ ಜ್ಞಾನ ಭಂಡಾರವೇ ಅಡಗಿದೆ, ಸಮಯವನ್ನು ದುರುಪಯೋಗಪಡಿಸಿಕೊಳ್ಳದೆ, ಸದುಪಯೋಗ ಪಡಿಸಿಕೊಂಡು, ಮುಂದಿನ ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಇದಕ್ಕೂ ಮೊದಲು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಬ್ರಿಟಿಷರ ದಾಸ್ಯದ ಸಂಕೋಲೆಯಲ್ಲಿದ್ದ ಭಾರತಕ್ಕೆ ಸ್ವಾತಂತ್ರ್ಯ ದೊರೆಯಲು ವೃತ್ತಪತ್ರಿಕೆಗಳು ಪ್ರಮುಖ ಪಾತ್ರ ವಹಿಸಿದ್ದವು ಎಂದು ಹೇಳಿದರು.

ಸ್ವಾತಂತ್ರ್ಯ ಹೋರಾಟಕ್ಕೆ ಪತ್ರಿಕೆಗಳು ಒಗ್ಗಟ್ಟಾಗಿ ಕೈಜೋಡಿಸಿದವು. ಲೇಖನಗಳು, ಸುದ್ದಿ, ಸಂಪಾದಕೀಯ ಮತ್ತು ಘಟನಾವಳಿಗಳ ಚಿತ್ರಣಗಳನ್ನು ಜನರಿಗೆ ಮನಮುಟ್ಟುವ ರೀತಿಯಲ್ಲಿ ತಲುಪಿಸಿ ಹೋರಾಟದ ಮನೋಭಾವವನ್ನು ಮತ್ತು ದೇಶಪ್ರೇಮದ ಬಗ್ಗೆ ಕಿಚ್ಚನ್ನು ಹಚ್ಚಲು ಪತ್ರಿಕೆಗಳು ಮುನ್ನುಡಿ ಬರೆದವು ಎಂದು ವಿವರಿಸಿದರು.


ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ ಪ್ರಾಧ್ಯಾಪಕರಾದ ಡಾ. ಸುಕನ್ಯಾ, ಡಾ.ಎಸ್.ಆರ್. ರಮೇಶ್, ಶೈಕ್ಷಣಿಕ ಡೀನ್ ಮತ್ತು ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಎಲ್. ರವಿ ಹಾಗೂ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ ಹಾಜರಿದ್ದರು.




## Volunteers of Mahajana Corps & Student Parliament Members Participated in Mysuru Run Ride organised by Rediant Sports - 18.12.2022





ಶಿಕ್ಷಣದಿಂದ ಶ್ರೇಷ್ಠತೆ

**ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು (ಸ್ವಾಯತ್ತ)**

ಜಯಲಕ್ಷ್ಮೀಪುರಂ, ಮೈಸೂರು–12

ಶ್ರೇಷ್ಠತೆಯ ಸಾಮರ್ಥ್ಯವುಳ್ಳ ಕಾಲೇಜು

**ಇತಿಹಾಸ ವಿಭಾಗ**

**Dept. of History**


**ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೊಂಡು, ನ್ಯಾಕ್‌ನಿಂದ 'ಎ' ಮಾನ್ಯತೆ ಪಡೆದಿದೆ.**




ಸಂಚಿಕೆ: 37 ಏಪ್ರಿಲ್ 2023 | ಪ್ರಧಾನ ಸಂಪಾದಕರು: ಡಾ. ಬಿ.ಆರ್. ಜಯಕುಮಾರಿ, ಪ್ರಾಂಶುಪಾಲರು | www.mahajana.edu.in | ಸಂಪಾದಕರು: ಡಾ. ಶ್ರೀಧರ ಹೆಚ್, ಇತಿಹಾಸ ವಿಭಾಗ | ಪುಟಗಳು: 10

**ಸಂಪಾದಕೀಯ**

# ಮಾನವತಾವಾದಿ ಕಾಯಕಯೋಗಿ ಬಸವಣ್ಣ



ಬಸವಣ್ಣನವರು ಜಾತಿ ಪದ್ಧತಿ, ಪುರೋಹಿತ ಶಾಹಿಗಳ ವಿರುದ್ಧವಾಗಿ ಕ್ರಾಂತಿ ಮಾಡಿದವರು. ಅವರು ಮೊದಲು ವೇದಶಾಸ್ತ್ರ ಆಗಮ ಪುರಾಣಗಳ ಮೂಡತನದಲ್ಲಿದ್ದವರನ್ನು ಎಚ್ಚರಿಸಿ ದೇವರನ್ನು ಕಾಣುವ ಸುಲಭ ಮಾರ್ಗ ತೋರಿದರು. ಸದಾಚಾರ ಗುಣಶೀಲತೆಗಳನ್ನು ಧರಿಸಬೇಕೆಂದರೂ ಎಲ್ಲ ಕೆಲಸಗಳೂ ಒಂದೇ ಎಂದು **"ಕಾಯಕವೇ ಕೈಲಾಸವೆಂದು"** ಹೇಳಿದರು.

ಬಸವಣ್ಣನವರು ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿಯಲ್ಲಿ ಕ್ರಿ.ಶ. 1132 ರಂದು ಜನಿಸಿದರು. ತಂದೆ ಮಾದರಸ ತಾಯಿ ಮಾದಲಾಂಬೆ. ಇವರು ಮೂಲತಃ ಬ್ರಾಹ್ಮಣ ಜಾತಿಗೆ ಸೇರಿದವರು. ಬಸವಣ್ಣರಿಗೆ ಅವರ ತಂದೆ ತಾಯಿಗಳು ಉಪನಯನ ಮಾಡಬೇಕೆಂದರು. ಆದರೆ ಈ ಸಾಮಾಜಿಕ ಮೂಢನಂಬಿಕೆಗಳ ಬಗ್ಗೆ ನಂಬಿಕೆಯಿಲ್ಲದ ಬಸವೇಶ್ವರರು ಚಿಕ್ಕಂದಿನಲ್ಲೇ ಮನೆ ಬಿಟ್ಟು ಹೊರ ನಡೆದರು. ಮುಂದೆ ಅವರು ವೀರಶೈವ ಧರ್ಮವನ್ನು ಪ್ರಚಾರ ಮಾಡತೊಡಗಿದರು. ಇವರು ತಮ್ಮ ಸೋದರ ಮಾವನ ಮಗಳಾದ ಗಂಗಾಂಬಿಕೆಯನ್ನು ಹಾಗೂ ನೀಲಾಂಬಿಕೆಯನ್ನು ಮದುವೆಯಾದರು.

12ನೇ ಶತಮಾನದಲ್ಲಿ ಬಸವೇಶ್ವರರು ಬಿಜ್ಜಳನ ಸಂಸ್ಥಾನಕ್ಕೆ ಸೇರಿ ಮಹಾಕ್ರಾಂತಿಯನ್ನೇ ಆರಂಭಿಸಿದರು. ಆಗ ಬಿಜ್ಜಳನ ಸಂಸ್ಥಾನದಲ್ಲಿ ಮಂತ್ರಿಯಾದರು. ಅವರ ಲಿಂಗಸೇವೆ ಜಂಗಮಸೇವೆ ದಾಸೋಹ ಮುಂತಾದವು ಅತ್ಯಂತ ಪ್ರಸಿದ್ಧವಾಗಿದ್ದವು. ಕ್ರಾಂತಿಕಾರಿ ಬಸವಣ್ಣನವರೆಂದೇ ಹೆಸರು ಪಡೆದರು. ಜಗತ್ತಿಗೆ ಜ್ಯೋತಿಯಂತೆ ಮಾರ್ಗದರ್ಶನ ನೀಡಿದರು. ಸಮಾಜದ ಎಲ್ಲಾ ವರ್ಗಗಳ ಜನರು ಬೆರೆತು ಸಮಾಜ ನಿರ್ಮಾಣ ಮಾಡಬೇಕೆಂದರು. ಶಿಭಕ್ತರಾದ ಬಸವೇಶ್ವರರು ಬಿಜ್ಜಳ ದೊರೆಯಿಂದ **'ಭಂಡಾರಿ'** ಎಂಬ ಪದವಿಯನ್ನು ಪಡೆದರು.

ವೀರಶೈವ ಧರ್ಮವನ್ನು ಪ್ರಚಾರಗೊಳಿಸಲು ಅವಿರತವಾಗಿ ಶ್ರಮಿಸಿದರು. ಇವರ ಕ್ರಾಂತಿಯ ಪರಿಣಾಮವಾಗಿ ಜಾತಿ, ಕುಲ ಪಂಗಡಗಳೆಂದು ಹತ್ತಾರು ಭಾಗಗಳಾಗಿ ಹರಿದು ಹಂಚಿ ಹೋಗಿದ್ದ ಸಮಾಜವು ಶೈವ ದೀಕ್ಷೆ ಹೊಂದಿ ಒಂದುಗೂಡಿತ್ತು.

"ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ ಮುನಿಯಬೇಡ ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ ಇದಿರು ಹಳಿಯಲು ಬೇಡ ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ. ಇದೇ ನಮ್ಮ ಕೂಡಲ ಸಂಗಮ ದೇವನೊಲಿಸುವ ಪರಿ" ಎಂಬ ವಚನದಲ್ಲಿ ಲೋಕಕ್ಕೆ ಆದರ್ಶವಾದ ವಿಚಾರಗಳನ್ನು ತಿಳಿಸಿದ್ದಾರೆ.

**ಪು.ತಿ.ನೋ.**



ಬಸವಣ್ಣನವರು ತಾವು ನಂಬಿದ ವೀರಶೈವ ಧರ್ಮವೇ ಶ್ರೇಷ್ಠವೆಂದು ಸಕಲ ಜನೋದ್ಧಾರಕರೆಂದು ಪರಿಗಣಿಸಿದರು. ವೀರಶೈವ ಧರ್ಮದ ತತ್ವವನ್ನು ಮನ್ನಿಸುವವರಿಗೆ ಲಿಂಗದೀಕ್ಷೆಯನ್ನು ನೀಡಿದರು. ಅಂದಿನ ಸಮಾಜದಲ್ಲಿ ಕೀಳು ಜಾತಿಯವರು ಎಂದು ಪರಿಗಣಿಸಲ್ಪಟ್ಟಿದ್ದ ಮಾದರ ಚೆನ್ನಯ್ಯ ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಹಡಪದ ಅಪ್ಪಣ್ಣ, ಕಿನ್ನರಿ ಬೊಮ್ಮಯ್ಯ, ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯ ಮೊದಲಾದ ಭಿನ್ನಮತಿಯರು ವೀರಶೈವ ಮತವನ್ನು ಸ್ವೀಕರಿಸಿದರು.

ಮಾನವ ಕುಲದಲ್ಲಿ ಗಂಡು–ಹೆಣ್ಣು ಎಂಬ ಎರಡೇ ಜಾತಿಯೆಂದು ಸಾರಿ ಹೇಳಿ ಸಮಾಜದಲ್ಲಿ ಬೆಳೆದು ಬಂದಿದ್ದ ಮೇಲು, ಕೀಳು ತಾರತಮ್ಯವನ್ನು ತೊಡೆದು ಹಾಕಿದರು. ವ್ಯಾಪಕವಾದ ಶಿಕ್ಷಣ ಮತ್ತು ಜ್ಞಾನಾಭಿವೃದ್ಧಿಯಿಂದ ಮಾತ್ರ ಸಮಾಜವನ್ನು ತಿದ್ದಲು ಸಾಧ್ಯವೆಂದು ಅರಿತ ಬಸವಣ್ಣನವರು ಧರ್ಮ ಜ್ಞಾನದ, ಪ್ರಸಾರಕ್ಕಾಗಿ ಅನುಭವ ಮಂಟಪವನ್ನು ಸ್ಥಾಪಿಸಿದರು. ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನವನ್ನು ಉನ್ನತ ಮಟ್ಟಕ್ಕೇರಿಸಿದರು. ಜಾತಿಯತೆಯ ಪಿಡುಗನ್ನು ನಿವಾರಿಸಿ ಅದರಿಂದ ಸಮಾಜದಲ್ಲಿ ನಡೆಯುತ್ತಿದ್ದ ಅನಿಷ್ಟಗಳನ್ನು ತೊಲಗಿಸಲು ಅಂತರ ಜಾತಿಯ ವಿವಾಹಕ್ಕೆ ಪ್ರೋತ್ಸಾಹ ನೀಡಿದರು. ಅಂತರ ಜಾತಿಯ ಹರಳಯ್ಯನ ಮಗನಿಗೂ ಬ್ರಾಹ್ಮಣ ಮಧುವರಸನ ಮಗಳಿಗೂ ವಿವಾಹ ಮಾಡಿಸಿದರು. ಸಂಪ್ರದಾಯ ಶರಣರಿಗೆ ಅಂದಿನ ಸಾಮಾಜಿಕ ಸ್ಥಿತಿಗತಿಗಳ ಹಿನ್ನೆಲೆಯಲ್ಲಿ ಬಸವಣ್ಣವರು ಪ್ರೋತ್ಸಾಹಿಸಿದ ಅಂತರ ಜಾತಿಯ ವಿವಾಹಗಳು ಹಿಡಿಸಲಿಲ್ಲ.

**"ದಯವೇ ಧರ್ಮದ ಮೂಲವೆಂದು"** ಪ್ರತಿಪಾದಿಸಿದರು. ಕ್ಷುದ್ರ ದೈವಗಳಲ್ಲಿಯ ನಂಬಿಕೆಯಿಂದ ಜನರು ಧರ್ಮದ ಹೆಸರಿನಲ್ಲಿ ಎಸಗುತ್ತಿದ್ದ ಅಪರಾಧಗಳನ್ನು ಖಂಡಿಸಿ ಸೂಕ್ಷ್ಮ ತಿಳುವಳಿಕೆ ನೀಡಿದರು. **"ಕೊಲ್ಲುವವನೇ ಮಾದಿಗ ಹೊಲಸು ತಿನ್ನುವವನೇ ಹೊಲೆಯ"** ಎಂದು ಹೇಳಿ ಸಮಾಜದಲ್ಲಿ ಮೇಲು, ಕೀಳು ಎಂಬ ತಾರತಮ್ಯದ ಭಾವನೆಯನ್ನು ಖಂಡಿಸಿ ಮಾನವನು ತನ್ನ ಕಾರ್ಯಸಾಧನೆಯಿಂದ ಉತ್ತಮನಾಗಬಲ್ಲವನೇ ಹೊರತು ಜಾತಿಯಿಂದಲ್ಲ ಎಂಬುವುದನ್ನು ಸ್ಪಷ್ಟಪಡಿಸಿದರು.

ಬಸವಣ್ಣನವರು ವಚನ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಹೇಳುವುದನ್ನು ಸಂಕ್ಷಿಪ್ತವಾಗಿ ನೇರವಾಗಿ ಎಲ್ಲರಿಗೂ ತಿಳಿಯುವಂತೆ ಹೇಳುವ ಬಹು ಸರಳ ಭಾಷೆ ಹಾಗೂ ಗಾಢವಾದ ಚಿಂತನೆಗಳಿಂದ ಕೂಡಿದ ವಚನಗಳಿಂದ ಕನ್ನಡ ಸಾಹಿತ್ಯಕ್ಕೆ ಅಪಾರ ಶಕ್ತಿ ಬಂದಿದೆ.

'ಕಾಯಕವೇ ಕೈಲಾಸ'

'ಅಯ್ಯಾ ಎಂದೆಡೆ ಸ್ವರ್ಗ
ಎಲವೋ ಎಂದೆಡೆ ನರಕ'

'ದಯವೇ ಧರ್ಮದ ಮೂಲವಯ್ಯಾ'

'ಸತ್ಯವ ನುಡಿವುದೇ ದೇವಲೋಕ
ಮಿಥ್ಯವ ನುಡಿವುದೇ ಮರ್ತ್ಯಲೋಕ'

'ಕಳಬೇಡ ಕೊಲಬೇಡ,
ಹುಸಿಯ ನುಡಿಯಲು ಬೇಡ
ಇದಿರು ಅಳೆಯಲು ಬೇಡ
ಅನ್ಯರಿಗೆ ಅಸಹ್ಯ ಪಡಬೇಡ
ಇದೇ ಅಂತಃರಂಗ ಶುದ್ಧಿ
ಇದೇ ಬಹಿರಂಗ ಶುದ್ಧಿ'

'ಕಾಗೆ ಒಂದಗುಳ ಕಂಡರೆ
ಕರೆಯದೆ ತನ್ನ ಬಳಗವನು'

'ಉಳ್ಳವರು ಶಿವಾಲಯವ ಕಟ್ಟುವರಯ್ಯಾ
ನಾನೇನು ಮಾಡಲಯ್ಯಾ
ಎನ್ನ ಕಾಲೇ ಕಂಬ, ದೇಹವೇ ದೇಗುಲ
ಶಿರವೇ ಹೊನ್ನ ಕಳಸವಯ್ಯ'

ಬಸವಣ್ಣನವರ ವಚನಗಳು ಸದಾ ಮೆಲುಕು ಹಾಕುವಂತಿರುವುದರ ಜೊತೆಗೆ ಜೀವನಕ್ಕೆ ಮಾರ್ಗದರ್ಶನ ನೀಡುತ್ತದೆ.

ಈ ರೀತಿ ಬೇಗನೆ ಕೀರ್ತಿ ಶಿಖರವನೇರಿದ ಬಸವೇಶ್ವರರನ್ನು ಕಂಡು ಸಹಿಸಲಾಗದ ಕೆಲವರು ಬಿಜ್ಜಳ ರಾಜನಿಗೆ ಕಿವಿ ಊದಿದರು. ಇದನ್ನರಿತ ಬಸವೇಶ್ವರರು ತಮ್ಮ ಮಂತ್ರಿ ಪದವಿಯನ್ನು ತ್ಯಜಿಸಿದರು. ತಮ್ಮ ಉಳಿದ ಜೀವನವನ್ನು ವೀರಶೈವ ಧರ್ಮ ಪ್ರಚಾರಕ್ಕೆ ಮುಡಿಪಾಗಿಟ್ಟವರು ಮುಂದೆ 1167ರಲ್ಲಿ ಕೂಡಲ ಸಂಗಮದಲ್ಲಿ ಇವರು ಲಿಂಗೈಕ್ಯರಾದರು.

**– ಡಾ. ಶ್ರೀಧರ ಹೆಚ್.**
ಮುಖ್ಯಸ್ಥರು, ಇತಿಹಾಸ ವಿಭಾಗ



## GANDHI BHAVAN

### Preamble and Justification for Gandhian Studies

M.K.Gandhi, affectionately known as Mahatma Gandhi, is one of world's great leaders who has left behind him a legacy of a system of thought, so much it has become common to speak of Gandhian thought. Mahatma is remembered as a freedom fighter, who won political freedom for India, His deeds, words and writings convey for certain outlook concerning a way of life for humanity as a whole he saw life as a whole and developed an integrated view of life for him, there was no line of demarcation between economics and ethics, ethics and politics, politics and sociology, sociology and economics etc., with a view to inculcate his ideals and thoughts among the young generation and general public to undertake research and extension activities for proliferating the principles and values propounded by Gandhi to establish an egalitarian society. The conversion of the department of Gandhian studies as a centre for Gandhian studies is felt necessary the University of Mysore is one of the prestigious and reputed Universities in India, which has to have more and centres of the studies of course spreading the message of Mahatma Gandhi is the prime objective of the centre.

### Genesis of Gandhi Bhavan

Gandhi Bhavan situated in Manasagangotri is one of the first Gandhi Bhavan to be established in India way back in the 1960s. soon after the assassination of Mahatma. It was felt by the Government of India, State Governments and freedom fighters to spread the message and Mahatma all over the country. With this purpose the Government of India encouraged the Universities of establish Gandhi Bhavan and make use to them to disseminate and spread the message of Mahtma all over the country for this purpose, the government of India encouraged the Universities the to establish Gandhi Bhavan. The University of Mysore also initiated plans to establish a Gandhi Bhavan on the University campus on the line of Gandhi Bhavan already established in other Universities.

The foundation stone of Gandhi Bhavan was laid on 13th October 1960. Chief Minister Shri. B.D. Jatthi. This was inaugurated on Sunday 31st January 1965 by Shri Morarji Bhai Desai, an ardent follower of Gandhiji, who later became the Prime Minister of India. So far, 14 scholars / professors have served as Directors of Gandhi Bhavan. The list of the Honorary Directors served in the University.

### Aims and Objectives

The main aims and objectives of the University of Mysore in establishing Gandhi Bhavan are to disseminate the message of Mahatma Gandhi among the students and general public as a whole. To achieve this purpose, Gandhi Bhavan organises seminars and symposia and invites lectures whenever possible Every year Gandhi Bhavan celebrates the independence day on 15th of August, Gandhi Jayanthi on 2nd October and the Marty's day on 30th of January. In addition for the high school students, quiz programmes and lectures on Gandhian thought are organized in collaboration with the school managements.

Centre for Gandhian studies – issues of quality, inter disciplinary approach and University - Industry Inter-face.

1. It is a matter of great concern that even the top ranking institutions of the country do not figure among the best in the world. Hence it is necessary to give due consideration for issues of quality in higher education.

2. There is greater need to give more attention to research and the quality of Ph.D. programmes.

3. The inter-disciplinary perspective have to become corner stones of present day research and it has to become part of the academic culture.

P.T.O



4. There is a need to reverse today's academic system where individual departments operate as islands, and there should be greater focus on problems that engage the faculty in inter-disciplinary research.

5.There is a need for strengthening the University – Industry to give a fillip to R and D. this is useful to University Departments as well as industrial undertakings. There is a need to make a detailed study of how this interface operate in other countries so that the best international practices can be replicated here. Precisely proposed centre for Gandhin studies takes care of above facts.

**Conclusion**

The field visit on January 3rd 2023 to the Gandhi Bhavan which is situated in the University of Mysore as per instructions of our professor of History was very education. The Gandhi Bhavan which is an museum that was established way back in the 1960s in ManasaGangotri is one of the first in India. It was our immense pleasure and honour to visit the Gandhi Bhavan for a field visit this academic year.

The Gandhi Bhavan which holds the memories of our history or as we can call it the remains of our history, which would make students wonder if we could follow the Gandhian ways of living and inculcate that in our life. The whole purpose of the Gandhi Bhavan being is to spread the message about Mahatma it is doing or upholding that mission. Finally, the visit have had an immense impact on the way we see Gandhi and his ways of leading life, which we could follow for betterment of our lives.

**- Ku. Rakshitha**
IV Sem B.A

**ಸತ್ಯ, ಅಹಿಂಸೆ, ಪ್ರಾಮಾಣಿಕತೆ, ಜಾತ್ಯಾತೀತತೆ, ಸಮಾನತೆ**
**ಗಾಂಧೀಜಿಯಿಂದ ಕಲಿಯಬೇಕಾದ ಗುಣಗಳು**
**ಸರಳ ಬದುಕಿನ ಮಹತ್ವ ತೋರಿಸಿಕೊಟ್ಟ ಮಹಾತ್ಮ**

ಗಾಂಧೀಜಿ ಎಂಬ 'ಜಗದ್ಗುರುವಿನ' ತತ್ವಾದರ್ಶಗಳ ಅನುಷ್ಠಾನ ನಮ್ಮ ಗುರಿಯಾಗಿರಲಿ. ಸತ್ಯ ಅಹಿಂಸೆಯ ಅಸ್ತ್ರಗಳಿಂದ ಎಂಥ ಬಲಶಾಲಿಗಳನ್ನಾದರೂ ಮಣಿಸಬಹುದೆಂದು ಜಗತ್ತಿಗೆ ತೋರಿಸಿಕೊಟ್ಟವರು ಗಾಂಧೀಜಿ. ಅವರ ಮೌಲ್ಯಗಳು ಇಡೀ ಮನುಕುಲಕ್ಕೆ ಸದಾಕಾಲಕ್ಕೂ ಆದರ್ಶಪ್ರಾಯ. ಸತ್ಯ, ಶಾಂತಿ, ಅಹಿಂಸೆ ಇವು ಗಾಂಧೀಜಿಯವರು ಪಾಲಿಸಿದ ತತ್ವಗಳಷ್ಟೆ ಅಲ್ಲ, ಅವರ ಬದುಕುಕೂಡ.

ನಿಜವಾಗಿಇತಿಹಾಸ ನಿರ್ಮಿಸಿದವರೇ ಹುತಾತ್ಮರು–ಎಂದು ಅಲಿಸ್ಟ್ರಕ್ರೌಲಿ ಅವರ ಮಾತು ಕೆಲವು ಸಂದರ್ಭಗಳಲ್ಲಿ ಸತ್ಯ. ಈ ಮಾತು ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ಮಹಾತ್ಮರಿಗೆ ಮಾತ್ರ ಅನ್ವಯಿಸುತ್ತದೆ ಎಂಬುದಂತೂ ಸತ್ಯ.

ಅನೇಕ ಮಹಾನ್ ವ್ಯಕ್ತಿಗಳ, ಮಹಾತ್ಮರ, ಆಧ್ಯಾತ್ಮಿಕ ಚಿಂತಕರ ಹಾಗೂ ಮಹಾಪುರುಷರಿಗೆ ಜನ್ಮ ನೀಡಿದ ದೇಶ ಭಾರತ. ದೇಶವನ್ನು ಕಟ್ಟುವ ಕೈಂಕರ್ಯದಲ್ಲಿ ಇವರ ಚಿಂತನೆಗಳು ದೊಡ್ಡ ಪಾತ್ರ ವಹಿಸಿವೆ. ಅವರ ಚಿಂತನೆಗಳೇ ಅಷ್ಟು ಪರಿಣಾಮಕಾರಿ ಮತ್ತು ಪ್ರಬಲವಾಗಿರುತ್ತಿದ್ದವು. ಇಂತಹ ಮಹಾನ್ ವ್ಯಕ್ತಿಗಳ ಮಾರ್ಗದರ್ಶನದ ನುಡಿಗಳು ನಮಗೆ ಸದಾ ದಾರಿದೀಪ. ಅಂತಹ ಮಹಾತ್ಮರಲ್ಲಿ ಗಾಂಧೀಜಿ ಅಗ್ರಗಣ್ಯರು.

ಸರ್ವಧರ್ಮ ಸಮಭಾವ, ಸಾಮಾಜಿಕ ನ್ಯಾಯ ಮತ್ತು ಜಾತ್ಯಾತೀತ ಸಿದ್ಧಾಂತದ ಬದ್ಧತೆ, ಪ್ರಕೃತಿ ಚಿಕಿತ್ಸೆಯ ಪ್ರಯೋಗಕಾರ, ಸಸ್ಯ ಆಹಾರದ ಪ್ರಯೋಗಕಾರ, ಅಸಾಧಾರಣ ಚಾಣಾಕ್ಷ ಮತ್ತು ಪ್ರಾಮಾಣಿಕ ರಾಜಕಾರಣಿ, ಸತ್ಯ ಮತ್ತು ಅಹಿಂಸೆಯ ಮೇಲೆ ಜೀವನವಿಡೀ ಪ್ರಯೋಗ ಮಾಡಿದ ಆತ್ಮ ಸಾಧಕ, ಅಪ್ಪಟ ಕರ್ಮಯೋಗಿ. ಹೀಗೆ ಮಹಾತ್ಮ ಗಾಂಧೀಜಿಯವರಿಗೆ ಅದೆಷ್ಟು ವಿಶೇಷಣೆಗಳು. ಅಹಿಂಸೆ ಮತ್ತು ಶಾಂತಿ ಎಂಬ ಅಸ್ತ್ರದಿಂದಲೇ ಭಾರತಕ್ಕೆ ಸ್ವಾಂತಂತ್ರ್ಯ ತಂದು ಕೊಡುವಲ್ಲಿ ಪ್ರಮುಖ ಪಾತ್ರವಹಿಸಿದ ಮಹಾತ್ಮಗಾಂಧಿಯವರ ಮರಣ ದಿನವನ್ನು ಭಾರತಾದಾದ್ಯಂತ ಪ್ರತಿವರ್ಷ ಜನವರಿ 30ರಂದು ಹುತಾತ್ಮರ ದಿನ ಎಂದು ಆಚರಿಸಲಾಗುತ್ತದೆ.

ಈ ದಿನ ಮಹಾತ್ಮನನ್ನು ನೆನೆದು, ದೇಶದ ಸ್ವಾತಂತ್ರ್ಯಕ್ಕಾಗಿ ಅವರು ನೀಡಿದ ಕೊಡುಗೆಯನ್ನು ಗುರುತಿಸಿ ಸ್ಮರಿಸಲಾಗುತ್ತದೆ. ಅದೇ ರೀತಿ ಮಾರ್ಚ್ 23ರಂದು ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರರಾದ ಭಗತ್‌ಸಿಂಗ್, ಶಿವರಾಮ ರಾಜಗುರು ಮತ್ತು ಸುಖದೇವ್ ಅವರನ್ನು ಬ್ರಿಟಿಷರು ಗಲ್ಲಿಗೇರಿಸಿದ್ದರು. ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯಕ್ಕಾಗಿ ಪ್ರಾಣತೆತ್ತ ವೀರ ಪುತ್ರರರಿಗೆ ಜನರು ಗೌರವಸಲ್ಲಿಸಲು ಮಾರ್ಚ್ 23ರಂದು ಕೂಡ ಹುತಾತ್ಮ ದಿನ ಅಥವಾ ಶಹೀದ್ ದಿವಸವನ್ನು ಆಚರಿಸಲಾಗುತ್ತಿದೆ.

**ಗಾಂಧೀಜಿಯ ಬದುಕೇ ಸಂದೇಶ**

ತಮ್ಮ ಬದುಕೇ ತಮ್ಮ ಸಂದೇಶ ಎಂದು ಬದುಕಿನ ಪ್ರತಿ ಗಳಿಗೆಯನ್ನೂ ಮೌಲ್ಯದ ಜೊತೆಯಲ್ಲೇ ಬದುಕಿದ, ಸತ್ಯಕ್ಕಾಗಿ ತಮ್ಮ ಜೀವನವನ್ನೆ ಪ್ರಯೋಗಕ್ಕೊಡ್ಡಿಕೊಂಡ ರಾಷ್ಟ್ರಪಿತ, ಮೋಹನ ದಾಸ ಕರಮಚಂದ ಗಾಂಧಿ ಹುಟ್ಟಿದ್ದು ಗುಜರಾತಿನ

ಪು.ತಿ.ನೋ.



ಪೋರಬಂದರಿನಲ್ಲಿ. 1869ರ ಅಕ್ಟೋಬರ್ 2ರಂದು ಜನಿಸಿದ ಗಾಂಧಿ, ಭೋಗಿಯಾಗಿ ಕೆಲಕಾಲ ಬದುಕಿ, ನಂತರ ವಿಷಯ ಸುಖಗಳ ಕುರಿತು ಜಿಗುಪ್ಸೆ ಹುಟ್ಟಿ ಯೋಗಿಯಾಗಿ ಬದಲಾದವರು. ಅವರ ಹಲವು ನಡೆಗಳು ವಿಮರ್ಶೆಗೊಳಪಟ್ಟು, ವಿವಾದ ಸೃಷ್ಟಿಸಿದ್ದರೂ, ತನ್ನ ಬದುಕೇ ತನ್ನ ಸಂದೇಶ ಎಂಬ ಅವರ ಆತ್ಮವಿಶ್ವಾಸ ನುಡಿ ಅವರನ್ನು ರಾಷ್ಟ್ರಪಿತನನ್ನಾಗಿ ಮಾಡಿತು.

1949ರ ಜನವರಿ 30ರಂದು ಪ್ರಾರ್ಥನೆಗೆಂದು ನವದೆಹಲಿಯ ಬಿರ್ಲಾ ಹೌಸ್‌ಗೆ ತೆರಳಿದ್ದ ಅವರ ಮೇಲೆ ನಾಥೂರಾಮ ಗೋಡ್ಸೆ ಮೂರು ಬಾರಿಗುಂಡಿಕ್ಕಿದ ಪರಿಣಾಮ ಅವರು ಸ್ಥಳದಲ್ಲೆ ಮೃತಪಟ್ಟಿದ್ದರು. ಆ ದಿನ ಇಡೀ ಭಾರತವೂ ಶೋಕ ಸಾಗರದಲ್ಲಿ ಮುಳುಗಿತ್ತು. ಆ ದಿನವನ್ನು ಇಂದಿಗೂ ಹುತಾತ್ಮರ ದಿನವೆಂದು ಆಚರಿಸಲಾಗುತ್ತದೆ.

ಹುತಾತ್ಮರ ದಿನದ ಈ ಸಂದರ್ಭದಲ್ಲಿ, ರಾಷ್ಟ್ರಪತಿ, ಉಪ ರಾಷ್ಟ್ರಪತಿ, ಪ್ರಧಾನಮಂತ್ರಿ, ರಕ್ಷಣಾ ಸಚಿವರು, ಭಾರತೀಯ ಸಶಸ್ತ್ರ ಪಡೆಗಳ ರಕ್ಷಣಾ ಸಿಬ್ಬಂದಿ ಮುಖ್ಯಸ್ಥ ಮತ್ತು ಮೂವರು ಸೇನಾ ಮುಖ್ಯಸ್ಥರು ರಾಜ್‌ಘಾಟ್ ಸ್ಮಾರಕದ ಸಮಾಧಿ ಬಳಿ ಸೇರಿ ಪೂಜೆ ಸಲ್ಲಿಸುವ ಮೂಲಕ ಅವರನ್ನು ಸ್ಮರಿಸುವುದು ಪ್ರತೀತಿ.

**ಜಗತ್ತಿನ ಅನೇಕ ಚಳವಳಿಗೆ ಪ್ರೇರಕ**

ಮಹಾತ್ಮಗಾಂಧೀಜಿ ಅವರ ತ್ಯಾಗ ನಮ್ಮಿಂದ ಅಸಾಧ್ಯವಾದರೂ ದೇಶ ಸೇವೆಗೆ ನಮ್ಮಿಂದಾಗುವ ರೀತಿಯ ಕೊಡುಗೆ ನೀಡಲು ಎಲ್ಲರನ್ನೂ ಪ್ರೇರೇಪಿಸುವಂತಿದೆ. ಅದಕ್ಕಾಗಿ ವರ್ತಮಾನ ಮತ್ತು ಭವಿಷ್ಯದ ದಿನಗಳಲ್ಲಿ ಅಹಿಂಸೆಯನ್ನು ಆಚರಿಸಲು ನಮ್ಮ ದೇಹ ಮತ್ತು ಮನಸ್ಸುಗಳನ್ನು ನಾವು ಶುದ್ಧಗೊಳಿಸಿಕೊಳ್ಳಬೇಕಾಗಿದೆ. ಆಗ ಮಾತ್ರ ನಮ್ಮಲ್ಲೂ ಶುದ್ಧವಾದ ಯೋಚನೆಗಳು ಬರಲು ಸಾಧ್ಯ. ಇದನ್ನೇ ವಚನಕಾರ ಬಸವಣ್ಣನವರು ಬಹಿರಂಗ, ಅಂತರಂಗ ಶುದ್ಧಿ ಎಂದು ಹೇಳಿರುವುದು. ಮನಸ್ಸಿನ ಕುರಿತು ಸ್ವಾಮಿ ವಿವೇಕಾನಂದರು ಹೇಳುವಂತೆ, ನಮ್ಮ ಮನಸ್ಸು ಪರಿಶುದ್ಧವಾದಾಗ ಅದೇ ಗುರುವಾಗಿ ನಿಂತು ಎಲ್ಲವನ್ನೂ ಬೋಧಿಸುತ್ತದೆ. ಹೀಗಾಗಿ ಮೊದಲು ಮನಸ್ಸಿನ ಶುದ್ಧಿಗೆ ಮುಂದಾದಾಗ ಮಾತ್ರ ನಾವು ಗುರುವಾಗಲು ಸಾಧ್ಯ. ನಮ್ಮ ನಾಳೆಯ ದಿನಗಳು ಸುಂದರವಾಗಿರಬೇಕಾದರೆ ನಮ್ಮ ಇಂದಿನ ಯೋಚನೆಗಳು ಸುಂದರವಾಗಿರಬೇಕು.

ಗಾಂಧೀಜಿ ವಸಾಹತು ಶಾಹಿಯನ್ನು ವಿರೋಧಿಸುತ್ತ ರಾಷ್ಟ್ರೀಯವಾದಿಯಾಗಿ ಬ್ರಿಟಿಷ್ ಆಳ್ವಿಕೆಯಿಂದ ಭಾರತವನ್ನು ಮುಕ್ತಗೊಳಿಸಲು ಯತ್ನಿಸಿದ್ದರು. ಅದಕ್ಕಾಗಿ ಅಹಿಂಸಾತ್ಮಕ ಮಾರ್ಗಗಳನ್ನು ಅನುಸರಿಸಿದರು. ಅಲ್ಲದೇ ಪ್ರಪಂಚದಾದ್ಯಂತ ನಾಗರಿಕ ಹಕ್ಕುಗಳು ಮತ್ತು ಸ್ವಾತಂತ್ರ್ಯಕ್ಕಾಗಿ ವಿವಿಧ ಚಳವಳಿಗಳಿಗೆ ಪ್ರೇರಕ ಶಕ್ತಿಯಾಗಿದ್ದರು. ದೇಶದ ಕುರಿತು ಅವರಿಗಿರುವ ಸಮರ್ಪಣಾ ಭಾವ ಮತ್ತು ಅವರ ಧೈರ್ಯವನ್ನು ನಾವೆಂದಿಗೂ ಮರೆಯಬಾರದು.

**ಗಾಂಧೀಜಿ ಅವರ ಆದರ್ಶ ಸ್ಮರಿಸೋಣ**

ಕೋಮು ಸೌಹಾರ್ದತೆಗಾಗಿ ತಮ್ಮ ಜೀವವನ್ನು ಬಲಿದಾನಗೈದ ಮಹಾತ್ಮಗಾಂಧೀಜಿ ಬದುಕಿನಲ್ಲಿ ಮಾತ್ರವಲ್ಲ ಸಾವಿನಲ್ಲಿಯೂ ಹೇಳಿ ಹೋಗಿರುವ ಪಾಠವನ್ನು ಮರೆಯದಿರೋಣ. ಗಾಂಧೀಜಿ ಎಂಬ 'ಜಗದ್ಗುರುವಿನ' ತತ್ವಾದರ್ಶಗಳ ಅನುಷ್ಠಾನ ನಮ್ಮ ಗುರಿಯಾಗಿರಲಿ. ಸತ್ಯ ಅಹಿಂಸೆಯ ಅಸ್ತ್ರಗಳಿಂದ ಎಂಥ ಬಲಶಾಲಿಗಳನ್ನಾದರೂ ಮಣಿಸಬಹುದೆಂದು ಜಗತ್ತಿಗೆ ತೋರಿಸಿಕೊಟ್ಟವರು ಮಹಾತ್ಮಾಗಾಂಧಿ. ಅವರ ಮೌಲ್ಯಗಳು ಇಡೀ ಮನುಕುಲಕ್ಕೆ ಸದಾ ಕಾಲಕ್ಕೂ ಆದರ್ಶಪ್ರಾಯ.

ಸತ್ಯ, ಶಾಂತಿ, ಅಹಿಂಸೆ ಇವು ಗಾಂಧೀಜಿಯವರು ಪಾಲಿಸಿದ ತತ್ವಗಳಷ್ಟೇ ಅಲ್ಲ, ಅವರ ಬದುಕು ಕೂಡ. ಅವರ ಪುಣ್ಯಸ್ಮರಣೆಯ ದಿನ ಬಾಪೂಜಿಯನ್ನು ಗೌರವದಿಂದ ಸ್ಮರಿಸೋಣ.

**ಗಾಂಧೀಜಿಯವರ ಕುರಿತು ಕೆಲ ವಿಶೇಷ ಸಂಗತಿಗಳು:**

1. ಮಹಾತ್ಮಾಗಾಂಧಿಯವರ ಮಾತೃ ಭಾಷೆ ಗುಜರಾತಿ.
2. ಗಾಂಧೀಜಿಯವರು ಅವರ ಕುಟುಂಬದಲ್ಲಿ ಕಿರಿಯ ಮಗನಾಗಿದ್ದರು. ಅವರಿಗೆ ಇಬ್ಬರು ಸಹೋದರರು ಮತ್ತು ಒಬ್ಬ ಸಹೋದರಿ ಇದ್ದರು.
3. ಮಹಾತ್ಮಾಗಾಂಧಿಯವರ ಜನ್ಮದಿನವನ್ನು ವಿಶ್ವವ್ಯಾಪಿ ಅಂತಾರಾಷ್ಟ್ರೀಯ ಅಹಿಂಸಾ ದಿನವೆಂದು ಸ್ಮರಿಸಲಾಗುತ್ತದೆ.
4. ಮಹಾದೇವದೇಸಾಯಿ ಗಾಂಧೀಜಿಯವರ ಪರ್ಸನಲ್ ಅಸಿಸ್ಟೆಂಟ್ ಆಗಿದ್ದರು.
5. ಗಾಂಧೀಜಿ ಮತ್ತು ಪ್ರಸಿದ್ಧ ಲೇಖಕ ರಷ್ಯಾದ ಕೌಂಟ್ ಲಿಯೋಟಾಲ್‌ಸ್ಟಾಯ್ ಪತ್ರಗಳ ಮೂಲಕ ಸಂವಹನ ನಡೆಸುತ್ತಿದ್ದರು.
6. 1930ರ ಟೈಮ್ಸ್ ಮ್ಯಾಗಜೀನ್‌ನಲ್ಲಿ ಗಾಂಧೀಜಿಯವರು 'ಮ್ಯಾನ್‌ಆಫ್ ದಿ ಇಯರ್' ಆಗಿದ್ದರು.
7. ಗಾಂಧೀಜಿಯವರು ಶಾಂತಿ ನೊಬೆಲ್ ಪ್ರಶಸ್ತಿಗೆ ಐದು ಬಾರಿ ನಾಮಿನೇಟ್ ಆಗಿದ್ದಾರೆ.
8. ಗಾಂಧೀಜಿಯವರಿಗೆ 'ಮಹಾತ್ಮ' ಎಂಬ ಬಿರುದು ನೀಡಿದ್ದು ನೊಬೆಲ್ ಪ್ರಶಸ್ತಿ ಪುರಸ್ಕೃತ ಕವಿ ರವೀಂದ್ರನಾಥ್ ಟ್ಯಾಗೋರ್.
9. ಮಹಾತ್ಮಾಗಾಂಧಿ ಅಂತ್ಯಕ್ರಿಯೆಯ ಮೆರವಣಿಗೆ 8 ಕಿಲೋಮೀಟರ್ ಉದ್ದವಿತ್ತು.
10. ಗಾಂಧಿ ಮೆಮೋರಿಯಲ್ ಮ್ಯೂಸಿಯಂ ಅನ್ನು ತಮಿಳುನಾಡಿನ ಮಧುರೈ ನಗರದಲ್ಲಿ ಸ್ಥಾಪಿಸಲಾಗಿದೆ. ಇದನ್ನು 'ಗಾಂಧಿ ಮ್ಯೂಸಿಯಂ' ಎಂದು ಕರೆಯಲಾಗುತ್ತದೆ. ಇಲ್ಲಿ ಗಾಂಧೀಜಿಯವರ ರಕ್ತದ ಉಡುಪು ಇದೆ. ಆ ಉಡುಪನ್ನು ಗಾಂಧೀಜಿಯವರು ಗೋಡ್ಸೆ ಹತ್ಯೆ ಮಾಡಿದ ಸಮಯದಲ್ಲಿ ಧರಿಸಿದ್ದರು.
11. ಗಾಂಧೀಜಿ ಶನಿವಾರ ಜನಿಸಿದರು, ಭಾರತಕ್ಕೆ ಶುಕ್ರವಾರ ಸ್ವಾತಂತ್ರ್ಯ ಸಿಕ್ಕಿತು ಮತ್ತು ಗಾಂಧೀಜಿ ಅವರನ್ನು ಶುಕ್ರವಾರ ಹತ್ಯೆ ಮಾಡಲಾಯಿತು.

**– ನಾಗರಾಜು ಎಂ**
ನಾಲ್ಕನೇ ಸೆಮಿಸ್ಟರ್ ಬಿ.ಎ.



## Seminar on 'Gandhi for Youths' and Posters - Khaadi Exhibition of Gandhi" Organised by Mahathma Gandhi Study Chair, KSOU, Mysuru in Association with Dept. of History, SBRR MFGC (A), Mysuru.

## 17-02-2023















ಆಂದೋಲನ

# 'ದ್ವೇಷಿಸಿದವರನ್ನೇ ಪ್ರೀತಿಸುತ್ತಿದ್ದರು ಗಾಂಧೀಜಿ'

## ಯುವಜನರಿಗಾಗಿ ಗಾಂಧಿ ಕುರಿತು ವಿಶೇಷ ಉಪನ್ಯಾಸ, ಪುಸ್ತಕ ಬಿಡುಗಡೆ, ಛಾಯಾಚಿತ್ರ ಪ್ರದರ್ಶನ, ಖಾದಿ ವಸ್ತುಗಳ ಮಾರಾಟ



ಮೈಸೂರು: ಗಾಂಧೀಜಿ ತಮ್ಮನ್ನು ಯಾರು ದ್ವೇಷಿಸಿದರೋ ಅವರನ್ನೇ ಪ್ರೀತಿಸುತ್ತಿದ್ದರು. ಯಾವ ವ್ಯಕ್ತಿಯನ್ನು ಬೇರೆಯವರು ಕಡೆಗಣಿಸುತ್ತಿದ್ದರೋ ಅಂತಹವರನ್ನೇ ಒಗ್ಗೂಡಿಸಿ ಹೋರಾಟಕ್ಕೆ ಸೇರಿಸಿ ಕೊಂಡಂತಹ ಶ್ರೇಷ್ಠ ವ್ಯಕ್ತಿ ಅವರು ಎಂದು ಗಾಂಧಿ ಸ್ಮಾರಕ ಭವನದ ಅಧ್ಯಕ್ಷರಾದ ನಾಡೋಜ ಡಾ.ವೂಡೇ ಪಿ.ಕೃಷ್ಣ ಹೇಳಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವತಿಯಿಂದ 'ಯುವಜನರಿಗಾಗಿ ಗಾಂಧಿ' ಕುರಿತು ಒಂದು ದಿನದ ವಿಶೇಷ ಉಪನ್ಯಾಸ, ಪುಸ್ತಕ ಬಿಡುಗಡೆ, ಛಾಯಾಚಿತ್ರ ಪ್ರದರ್ಶನ ಹಾಗೂ ಖಾದಿ ವಸ್ತುಗಳ ಮಾರಾಟ ಮತ್ತು ಪ್ರದರ್ಶನದ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಗಾಂಧೀಜಿ ಅವರ ಇಡೀ ಬದುಕಿನಲ್ಲಿ ಎಲ್ಲರನ್ನೂ ಪ್ರೀತಿಸಿದರು. ಯಾರನ್ನೂ ದ್ವೇಷಿಸಲಿಲ್ಲ. ದೇಶಕ್ಕಾಗಿ ಹೋರಾಟ ಮಾಡಿದವರಲ್ಲಿ ಗಾಂಧೀಜಿ ಪ್ರಮುಖರು. ಗಾಂಧಿಜೀ ಇಡೀ ವಿಶ್ವಕ್ಕೆ ನಾಯಕರಾಗಿದ್ದರು. ಭಾರತ ಬಿಟ್ಟು ಗಾಂಧಿ ಇಲ್ಲ, ಗಾಂಧಿ ಬಿಟ್ಟು ಭಾರತ ಇಲ್ಲ ಎಂದು ಅಭಿಪ್ರಾಯಪಟ್ಟರು. ನಾವುಗಳು ಹಣಕಾಸು ದುಡಿಯುವ ಯಂತ್ರಗಳಾಗಬಾರದು.

ದೇಶಕ್ಕಾಗಿ ಹೋರಾಟ ಮಾಡಿ ಬದುಕನ್ನು ರೂಪಿಸಿಕೊಳ್ಳುವವ ರಾಗಬೇಕು. ಸತ್ಯಕ್ಕೆ ಹತ್ತಿರ ಇದ್ದಷ್ಟು ಗಾಂಧೀ ಅವರ ಹತ್ತಿರಕ್ಕೆ ಹೋದಂತೆ, ಅವರು ಬಳಸುತ್ತಿದ್ದ ಉಡುಪುಗಳನ್ನೇ ತೊಡಬೇಕಾಗಿಲ್ಲ ಅವರ ತತ್ತ್ವ ಆದರ್ಶಗಳನ್ನು ಪಾಲಿಸಬೇಕಿದೆ. ತತ್ವ, ಅಹಿಂಸೆಯ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಬೇಕಿದೆ. ಗಾಂಧೀಜಿಯವರ ಬದುಕು, ಬೋಧನೆ, ತತ್ವಾದರ್ಶಗಳು ನಮ್ಮೆಲ್ಲರ ಹೃದಯದಲ್ಲಿ ಎಂದಿಗೂ ಅಜರಾಮರ. ಅವರು ಹೇಳಿದ ಅನೇಕ ಮಾತುಗಳು ಇವತ್ತಿಗೂ ಸತ್ಯ ಎಂದರು.

ರಂಗಕರ್ಮಿ ಪ್ರಸನ್ನ ಹೆಗ್ಗೋಡು ಮಾತನಾಡಿ, ಗಾಂಧೀಜಿಯವರ ಮುಖ್ಯ ತತ್ವಗಳಲ್ಲಿ ಸತ್ಯವು ಒಂದು. ನಿಜ ಅಥವಾ ಸತ್ಯದ ಪರಿಶೋಧನೆ ಎಂಬ ವಿಸ್ತೃತ ಉದ್ದೇಶಕ್ಕಾಗಿ ಗಾಂಧೀಜಿಯವರು ತಮ್ಮ ಜೀವನವನ್ನೇ ಮುಡಿಪಾಗಿಟ್ಟವರು. ತಮ್ಮ ತಪ್ಪುಗಳಿಂದಲೇ ಕಲಿತು, ತಮ್ಮ ಮೇಲೆಯೇ ಪ್ರಯೋಗಗಳನ್ನು ಮಾಡಿಕೊಂಡು ಸತ್ಯದ ಮಾರ್ಗವನ್ನು ಸಾಧಿಸಲು ಪ್ರಯತ್ನಿಸಿದರು. ಈ ಹಿಂದೆ ಎಲ್ಲ ಧರ್ಮದ ಮಹನೀಯರ ವಿಚಾರಗಳನ್ನು ಅವರವರ ಜೀವನ ಶೈಲಿ ಮೂಲಕ ತಿಳಿದುಕೊಳ್ಳುತ್ತಿದ್ದರು. ಜಂಗಮಕ್ಕೆ ಸ್ಥಾವರ- ಸ್ಥಾವರಕ್ಕೆ -ಜಂಗಮ ಮುಖ್ಯವಾಗಿದೆ. ಸ್ಥಾವರ ಹಾಗೂ ಜಂಗಮದ ನಡುವೆ ಸಮಾನತೆಯನ್ನು ಸರಿಯಾದ ರೀತಿಯಲ್ಲಿ ರೂಪಿಸಿದರೆ ಮಾತ್ರ ಉತ್ತಮವಾದ ಸಮಾಜ ನಿರ್ಮಿಸಬಹುದು ಎಂದರು.

ಇಂದು ಹೆಚ್ಚು ಪುಸ್ತಕ ಬಳಸುವ ಮೊದಲು ಮೊಬೈಲ್ ನಲ್ಲಿಯೇ ಎಲ್ಲ ಮಾಹಿತಿಯನ್ನು ಪಡೆದುಕೊಳ್ಳುವಂತಹ ಬೆಳವಣಿಗೆ ಆಗಿದೆ. ನಾವು ಬೇರೆ, ಧರ್ಮ ಬೇರೆ ಎಂಬುದನ್ನು ರೂಢಿಸಿಕೊಂಡು ಒಬ್ಬರಿಗೊಬ್ಬರ ಜೊತೆ ವೈರತ್ವವನ್ನು ಹುಟ್ಟುಹಾಕುವ ಬದಲು ಎಲ್ಲರೂ ಒಂದೇ ಎಂಬ ಮನೋಭಾವ ಬೆಳೆಸಿಕೊಳ್ಳೋಣ ಎಂದರು.

ಕಾರ್ಯಕ್ರಮದಲ್ಲಿ ಮುಕ್ತ ವಿವಿ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ, ಕುಲಸಚಿವ ಪ್ರೊ.ಕೆ.ಎಲ್.ಎನ್. ಮೂರ್ತಿ, ಮಹಾತ್ಮ ಗಾಂಧಿ ಅಧ್ಯಯನ ಪೀಠದ ಗೌರವ ನಿರ್ದೇಶಕರಾದ ಡಾ.ಆರ್.ಎಚ್.ಪವಿತ್ರ, ಗಾಂಧಿ ಸ್ಮಾರಕ ಭವನದ ಉಪಾಧ್ಯಕ್ಷ ಪ್ರೊ.ಜಿ.ಬಿ.ಶಿವರಾಜು, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಉಪಸ್ಥಿತರಿದ್ದರು.

Andolana Edition
Feb 8, 2023 Page No. 10
Powered by : eReleGo.com



## Visited to Museum of Gandhi Study Centre, University of Mysore, Manasagangothri, Mysuru - 3.1.2023











## VoMC Members Voluntarily Served in 'Mysuru Literary Fest' - 2023 12.01.2023














Release of 'Kadamba' Monthly Newsletter - 'Sanchike 36' - 31.12.2022



History Evaluation work - 2022-23 (Odd Semester) - 11.04.2023

ಶಿಕ್ಷಣದಿಂದ ಶ್ರೇಷ್ಠತೆ

**ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು (ಸ್ವಾಯತ್ತ)**

ಜಯಲಕ್ಷ್ಮೀಪುರಂ, ಮೈಸೂರು–12

ಶ್ರೇಷ್ಠತೆಯ ಸಾಮರ್ಥ್ಯವುಳ್ಳ ಕಾಲೇಜು

**ಇತಿಹಾಸ ವಿಭಾಗ**

**Dept. of History**

**ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೊಂಡು, ನ್ಯಾಕ್‌ನಿಂದ 'ಎ' ಮಾನ್ಯತೆ ಪಡೆದಿದೆ.**




ಸಂಚಿಕೆ: 38 ಜೂನ್ 2023 | ಪ್ರಧಾನ ಸಂಪಾದಕರು: ಡಾ. ಬಿ.ಆರ್. ಜಯಕುಮಾರಿ, ಪ್ರಾಂಶುಪಾಲರು | www.mahajana.edu.in | ಸಂಪಾದಕರು: ಡಾ. ಶ್ರೀಧರ ಹೆಚ್, ಇತಿಹಾಸ ವಿಭಾಗ | ಪುಟಗಳು: 9

## ಸಂಪಾದಕೀಯ

## ಯೋಗದ ಮಹತ್ವ ಮತ್ತು ಇತಿಹಾಸ ಬಲ್ಲಿರಾ . .



ಕ್ರಿ.ಪೂ. 3ನೇ ಶತಮಾನದಲ್ಲಿದ ಪತಂಜಲಿ ಋಷಿಯ ಚಿಂತನೆಗೆ ಫಲವಾದ ಯೋಗ ಬರೀ ಶಾಸ್ತ್ರವಾಗದೆ, ಆಚರಣೆಯು ಅಭ್ಯಾಸವಾಗಿ ಇಲ್ಲಿ ತನಕ ಬೆಳೆದು ಬಂದಿದೆ. ಪ್ರತಿ ವ್ಯಕ್ತಿಯ ದೈಹಿಕ, ಮಾನಸಿಕ, ಭಾವನಾತ್ಮಕ, ಆಧ್ಯಾತ್ಮಿಕ ಉನ್ನತಿಗೆ, ಕ್ರಿಯಾಶೀಲತೆಗೆ ಯೋಗ ಸಹಕಾರಿಯಾಗಿದೆ.

### ಯೋಗದ ಮಹತ್ವ

ಯೋಗ, ವ್ಯಾಯಾಮ ಮಾತ್ರವಲ್ಲದೆ ನಿಮ್ಮೊಂದಿಗೆ, ವಿಶ್ವ ಹಾಗೂ ಪ್ರಕೃತಿಯ ಜೊತೆಗೆ ಏಕತೆಯ ಅರ್ಥವನ್ನು ಕಂಡುಹಿಡಿಯಲು ನೆರವಾಗುತ್ತದೆ. ನಮ್ಮ ಜೀವನ ಶೈಲಿ ಹಾಗೂ ಪ್ರಜ್ಞೆ ರಚಿಸುವ ಮೂಲಕ ಹವಾಮಾನ ಬದಲಾವಣೆ ನಿಭಾಯಿಸಲು ಮತ್ತು ಯೋಗಕ್ಷೇಮವನ್ನು ಸುಧಾರಿಸಲು ಸಹಾಯ ಮಾಡುತ್ತದೆ. ಯೋಗವು ಮನಸ್ಸು ಮತ್ತು ದೇಹ; ಚಿಂತನೆ ಮತ್ತು ಕ್ರಿಯೆ; ಸಂಯಮ ಮತ್ತು ಸಾರ್ಥಕತೆಯನ್ನು ಒಗ್ಗೂಡಿಸುತ್ತದೆ. ಹಾಗೆಯೇ ಪ್ರಕೃತಿ ಮತ್ತು ಮನುಷ್ಯನ ನಡುವೆ ಸಾಮರಸ್ಯವನ್ನುಂಟು ಮಾಡುತ್ತದೆ. ಯೋಗವು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಉತ್ತಮವಾಗಿರಿಸುವ ವಿಶೇಷ ಕಲೆಯಾಗಿದೆ.

### ಯೋಗ ದಿನಾಚರಣೆಯ ಇತಿಹಾಸ

ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಕರಡು ಪ್ರಸ್ತಾವನೆಯನ್ನು 2014ರ ಡಿಸೆಂಬರ್‌ನಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಭಾರತದ ಖಾಯಂ ಪ್ರತಿನಿಧಿಯಾಗಿರುವ ಅಶೋಕ್‌ಕುಮಾರ್ ಮಂಡಿಸಿದ್ದರು. ವಿಶ್ವಸಂಸ್ಥೆಗೆ ಇದು ಐತಿಹಾಸಿಕ ಕ್ಷಣವಾಗಿದ್ದು, ಅದರ ಸದಸ್ಯ ರಾಷ್ಟ್ರಗಳು ಅಭೂತಪೂರ್ವ ಬೆಂಬಲ ಸೂಚಿಸಿದ್ದರು. ವಿಶ್ವಸಂಸ್ಥೆಯ 193 ರಾಷ್ಟ್ರಗಳ ಪೈಕಿ 177 ದೇಶಗಳು ಅನುಮೋದನೆಯನ್ನು ನೀಡಿದ್ದವು. 2015 ಜೂನ್, 21ನೇ ತಾರೀಖಿನಂದು ಮೊದಲ ಅಂತರಾಷ್ಟ್ರೀಯ ಯೋಗ ದಿನವನ್ನು ವಿಶ್ವದಾದ್ಯಂತ ಆಚರಿಸಲಾಗಿದೆ.

### ಜೂನ್ 21ರ ವಿಶೇಷ

ಜೂನ್ 21 ದೀರ್ಘಕಾಲ ಹಗಲು ಹೊಂದಿರುವ ದಿನ, ವರ್ಷದಲ್ಲಿ ಉತ್ತರ ಗೋಳಾರ್ಧದ ಅತಿ ಉದ್ದದ ಹಾಗೂ ದಕ್ಷಿಣ ಗೋಳಾರ್ಧದ ಅತಿ ಚಿಕ್ಕ ದಿನವನ್ನು ಅಂತರಾಷ್ಟ್ರೀಯ ಯೋಗ ದಿನಾಚರಣೆಗೆ ಆಯ್ಕೆ ಮಾಡಲಾಗಿದೆ.

ಈ ದಿನವನ್ನು ಬೇಸಿಗೆ ಅಯನ ಸಂಕ್ರಾಂತಿ ದಿನವೆಂದು (ವರ್ಷದಲ್ಲಿನಅತ್ಯಂತ ಹೆಚ್ಚು ಹಗಲುಳ್ಳ ದಿನ) ಕರೆಯಲಾಗುತ್ತದೆ. ಯೋಗ ದೃಷ್ಟಿಕೋನದಲ್ಲಿ ಇದು ಅತ್ಯಂತ ಹೆಚ್ಚು ಮಹತ್ವ ಪಡೆದಿದೆ. ಇದು ದಕ್ಷಿಣಯಾನಕ್ಕೆ ಪರಿವರ್ತನೆ ಎಂದು ಗುರುತಿಸಲಾಗುತ್ತದೆ.

ದಕ್ಷಿಣಯಾನವನ್ನು ಆಧ್ಯಾತ್ಮಿಕ ಅಭ್ಯಾಸಗಳಿಗೆ ನೈಸರ್ಗಿಕ ಬೆಂಬಲವೆಂದು ಪರಿಗಣಿಸಲಾಗುತ್ತದೆ. ಆದಿಕಾಲದಲ್ಲಿ ಸೂರ್ಯಾಭಿಮುಖವಾಗಿ ದೃಷ್ಟಿನೆಟ್ಟು ಧೀ ಶಕ್ತಿ ಉದ್ದೀಪನಗೊಳಿಸುತ್ತಿದ್ದ ದಿನ ಇದಾಗಿದೆಎಂದು ನಂಬಲಾಗಿದೆ. ಹಾಗಾಗಿ ಈ ಪರಿವರ್ತನೆಯು ಯೋಗ ಅಭ್ಯಾಸಿಗರಿಗೆ ಬೆಂಬಲಿಸಲಾಗುತ್ತದೆ ಎಂಬ ನಂಬಿಕೆಯಿದೆ. ಬೇಸಿಗೆ ಅಯನ ಸಂಕ್ರಾಂತಿಯ ಬಳಿಕ ಮೊದಲ ಹುಣ್ಣಿಮೆಯನ್ನು ಗುರುಪೂರ್ಣಿಮಾ ಎಂದು ಕರೆಯಲಾಗುತ್ತದೆ. ಇವೆಲ್ಲದರ ಹೊರತಾಗಿ ಶಿವನು ಈ ದಿನದಂದು ಉಳಿದ ಮಾನವ ಜನಾಂಗಕ್ಕೆ ಯೋಗದ ಜ್ಞಾನವನ್ನು ನೀಡಲು ಪ್ರಾರಂಭಿಸಿದನೆಂಬ ನಂಬಿಕೆಯಿದೆ. ಶಿವ ದೇವರು ಯೋಗದ ಆದಿ ಗುರು ಆದ ದಿನವೂ ಕೂಡಾ ಹೌದು.

**ಪು.ತಿ.ನೋ.**



**ಯೋಗ ದಿನದ ಬಗ್ಗೆ ಪ್ರಧಾನ ಮೋದಿ ಮಾತು**

ಅಂತರಾಷ್ಟ್ರೀಯ ಯೋಗ ದಿನ ಆಚರಣೆಗೆ ಪ್ರಧಾನಿ ಮೋದಿಯವರ ಕೊಡುಗೆ ಬಹಳಷ್ಟಿದೆ. ಮೊದಲ ಅಂತರಾಷ್ಟ್ರೀಯ ಯೋಗ ದಿನದಂದು ಮಾತನಾಡಿದ್ದ ಮೋದಿಯವರು ಆಧುನಿಕ ಜೀವನಶೈಲಿಯ ಸಮಸ್ಯೆಗಳು ನಮಗೆಲ್ಲರಿಗೂ ತಿಳಿದಿದೆ.

ಜನರು ಒತ್ತಡ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದಾರೆ. ಮಧುಮೇಹ ಹಾಗೂ ರಕ್ತದೊತ್ತಡದಂತಹ ಜೀವನ ಶೈಲಿ ಸಂಬಂಧಿತ ರೋಗದಿಂದ ಬಳಲುತ್ತಿದ್ದಾರೆ. ಸಂವಹನ ರೋಗಗಳನ್ನು ನಿಯಂತ್ರಿಸಲು ನಾವು ವಿಧಾನಗಳನ್ನು ಹುಡುಕಿದ್ದೇವೆ. ಆದರೆ ಸಂವಹನ ಮಾಡದ ರೋಗಗಳಿಗೆ ಹೊರೆ ವರ್ಗಾಯಿಸಿಕೊಂಡಿದೆ. ಶಾಂತಿಯಿಲ್ಲದೆ ನರಳಾಡುತ್ತಿರುವ ಇಂದಿನ ಯುವ ಜನಾಂಗ ಔಷಧಿಗಳಲ್ಲಿ ಆಶ್ರಯ ಪಡೆಯುತ್ತಾರೆ. ಯೋಗವನ್ನು ಅಭ್ಯಾಸ ಮಾಡುವುದರ ಮೂಲಕ ಒತ್ತಡ ಹಾಗೂ ಬಹುಕಾಲದ ಅನಾರೋಗ್ಯದಿಂದ ಮುಕ್ತಿ ಪಡೆಯಬಹುದಾಗಿದೆ ಎಂಬುದಕ್ಕೆ ಪುರಾವೆಗಳಿವೆ ಎಂದಿದ್ದರು.

**ಯೋಗ ದಿನವನ್ನು ನಾವು ಹೆಮ್ಮೆಯಿಂದ ಆಚರಿಸಬೇಕು. ಏಕೆಂದರೆ ಇಡೀ ವಿಶ್ವಕ್ಕೆ ಯೋಗವನ್ನು ಪರಿಚಯಿಸಿಕೊಟ್ಟಿದ್ದು ನನ್ನ ಭಾರತ.**

**– ಡಾ. ಶ್ರೀಧರ ಹೆಚ್**

ಶೈಕ್ಷಣಿಕ ಡೀನ್, ಮುಖ್ಯಸ್ಥರು, ಇತಿಹಾಸ ವಿಭಾಗ







## ಮೇ 1, ಅಂತರಾಷ್ಟ್ರೀಯ ಕಾರ್ಮಿಕ ದಿನಾಚರಣೆ
## ಭಾರತದಲ್ಲಿ ಕಾರ್ಮಿಕ ನಾಯಕರಾಗಿ ಬಾಬಾಸಾಹೇಬ ಅಂಬೇಡ್ಕರರು ಕಾರ್ಮಿಕರಿಗಾಗಿ ನೀಡಿದ ಕೊಡುಗೆಗಳನ್ನು ನೆನಪಿಸಿಕೊಳ್ಳೋಣ

1. ಭಾರತದಲ್ಲಿ ಕಾರ್ಮಿಕರ ಕೆಲಸದ ವೇಳೆ 12 ಗಂಟೆಯಿಂದ 8 ಗಂಟೆಗೆ ಕಡಿಮೆ ಮಾಡಿಸಿದರು – 1942ರಲ್ಲಿ
2. ಭವಿಷ್ಯ ನಿಧಿ ಸ್ಥಾಪನೆ (PF)
3. ಕನಿಷ್ಠ ವೇತನ ಜಾರಿ
4. ತಾಂತ್ರಿಕ ತರಬೇತಿಗಳ ಯೋಜನೆ
5. ಹಣಕಾಸು ಯೋಜನೆ
6. ಕಾರ್ಮಿಕರ ರಾಜ್ಯ ವಿಮೆ (ESI)
7. ವೃತ್ತಿ ಸಂಘಟನೆಗಳ ಬಲಪಡಿಸುವುದು
8. ಉದ್ಯೋಗಿಗಳಿಗೆ ಪರಿಹಾರ ಸೌಲಭ್ಯ
9. ದೇಶಾದ್ಯಂತ ಉದ್ಯೋಗ ವಿನಿಮಯ ಕಛೇರಿಗಳ ಸ್ಥಾಪನೆ
10. ಕಾರ್ಖಾನೆ ನೌಕರರಿಗೆ ರಜೆಗಳು
11. ವೈದ್ಯಕೀಯ ರಜೆ
12. ತುಟ್ಟಿ ಭತ್ಯೆ (D.A.)
13. ರಜಾ ಸೌಲಭ್ಯಗಳು CL / EL etc.
14. ವೇತನ ಪರಿಷ್ಕರಣೆ
15. ಕಾರ್ಮಿಕ ಕಲ್ಯಾಣ ನಿಧಿ ಸ್ಥಾಪನೆ
16. ಕೇಂದ್ರೀಯ ತಾಂತ್ರಿಕ ವಿದ್ಯುಚ್ಛಕ್ತಿ ಮಂಡಳಿ ಸ್ಥಾಪನೆ (CTPB)
17. ಭಾರತೀಯ ಕಾರ್ಖಾನೆಗಳ ಕಾಯ್ದೆ
18. ರಜೆಯ ಸಹಿತ ವೇತನ
19. ಆರೋಗ್ಯ ವಿಮೆ
20. ಕಾನೂನುಬದ್ಧ ಮುಷ್ಕರ ಕಾಯ್ದೆ
21. ಭಾರತೀಯ ಅಂಕಿ ಅಂಶಗಳ ಕಾಯ್ದೆ
22. ಸುರಕ್ಷತೆ ಕಾಯ್ದೆ Safety
23. ಸಮಾನ ಕೆಲಸಕ್ಕೆ ಸಮಾನ ವೇತನ
24. ಉದ್ಯೋಗದ ಅವಧಿಯಲ್ಲಿ ಮೃತ್ಯುಗೊಂಡರೆ ಕುಟುಂಬಸ್ಥರೊಬ್ಬರಿಗೆ ನೌಕರಿ ನೀಡುವುದು
25. ನಿವೃತ್ತಿ ವೇತನ ನೀಡುವುದು
26. ಸೇವಾಭದ್ರತೆ ಒದಗಿಸುವುದು

**ಮಹಿಳೆಯರಿಗಾಗಿ ಕಾರ್ಮಿಕರಿಗಾಗಿ ಜಾರಿಗೆ ಮಾಡಿದ ಕಾನೂನುಗಳು**

1. ಸ್ತ್ರೀಯರಿಗೆ ಹೆರಿಗೆ ರಜೆ
2. ಮಹಿಳಾ ಕಾರ್ಮಿಕರ ಕಲ್ಯಾಣ ನಿಧಿ
3. ಮಹಿಳಾ ಮತ್ತು ಮಕ್ಕಳ ರಕ್ಷಣಾ ಕಾಯ್ದೆ
4. ಉಕ್ಕು ಗಣಿಗಾರಿಕೆ ಮಹಿಳಾ ಉದ್ಯೋಗಿಗಳ ಹೆರಿಗೆ ರಜೆ
5. ಪುರುಷ ಮತ್ತು ಮಹಿಳೆಯರಿಗೆ ಸಮಾನ ವೇತನ
6. ಆಳವಾದ ಉಕ್ಕು ಗಣಿಗಾರಿಕೆಯಲ್ಲಿ ಮಹಿಳೆ ಕೆಲಸ ಮಾಡುವುದು ನಿಷೇಧ
7. ಮಹಿಳಾ ಉದ್ಯೋಗಿಗಳಿಗೆ ವಿಮೆ ಮತ್ತು ತುಟ್ಟಿಭತ್ಯೆ (TA & DA)

**ಇನ್ನೂ ಹೆಚ್ಚಿನ ಕಾಯ್ದೆಗಳು ಭಾರತದಲ್ಲಿ ಬಾಬಾಸಾಹೇಬರು ಜಾರಿಗೆ ಮಾಡಿದರು**

1. ದಾಮೋದರ ವ್ಯಾಲಿ ಯೋಜನೆ
2. ಹಿರಾಕುಡ್ ಡ್ಯಾಂ ಯೋಜನೆ
3. ಭಾಕ್ರಾನಂಗಾಲ್ ಡ್ಯಾಂ ಯೋಜನೆ
4. ಸೋನೆನದಿ ಯೋಜನೆಗಳು ಜಾರಿಗೆ ಮಾಡುವಲ್ಲಿ ಡಾ.ಅಂಬೇಡ್ಕರ್‌ರವರು ಪ್ರಮುಖ ಪಾತ್ರ ವಹಿಸಿದ್ದಾರೆ.

**– ಪ್ರೀತಿ ಎನ್**
ದ್ವಿತೀಯ ವರ್ಷದ ಬಿಎ ವಿದ್ಯಾರ್ಥಿನಿ



## ಕರ್ನಾಟಕ ಸಂಗೀತದ ತ್ರಿಮೂರ್ತಿಗಳ ರಾಜ ಈ ತ್ಯಾಗರಾಜ

ಮೇ 4, **ಕರ್ನಾಟಕ ಶಾಸ್ತ್ರೀಯ ಸಂಗೀತದ ಪ್ರಮುಖ ವಾಙ್ಮಯಕಾರರಾದ ತ್ಯಾಗರಾಜರ ಜನುಮದಿನ**



ಆ ಮಹಾನುಭಾವನನ್ನು ನೆನೆಯುತ್ತಾ, ಜೊತೆಗೆ, ಎಲ್ಲೆಲ್ಲಿಯೂ ಇರಬಹುದಾದ ಮಹಾನುಭಾವರಿಗೆ, ತ್ಯಾಗರಾಜರ ಮಾತಿನಲ್ಲೇ ಎಂದರೋ ಮಹಾನುಭಾವುಲು ಅಂದರಿಕಿ ವಂದನಮುಲು ಎಂದು ನಮಿಸಿ ನಮ್ಮ ಕೃತಜ್ಞತೆಗಳನ್ನು ಸಲ್ಲಿಸಲು ಸುಸಂದರ್ಭ ಈ ರಾಜಯಾವ ಯುದ್ಧವನ್ನೂ ಮಾಡಿಜಯಿಸಲಿಲ್ಲ, ಯಾವ ರಾಜ್ಯಕ್ಕೂ ರಾಜನಾಗಲಿಲ್ಲ, ಎಲ್ಲವನ್ನೂ ತ್ಯಾಗ ಮಾಡಿದರೂ, ಸಂಗೀತ ಪ್ರಪಂಚಕ್ಕೇ ರಾಜರಾಗಿ ಮೆರೆದರು. ಹೌದು ಕರ್ನಾಟಕ ಸಂಗೀತದ ವಾಙ್ಮಯಕಾರರಲ್ಲಿ ತ್ಯಾಗರಾಜ ಭಾಗವತರ ಹೆಸರು ಬಹಳ ಪ್ರಮುಖವಾದದ್ದು. ತ್ಯಾಗರಾಜರು ಕರ್ನಾಟಕ ಸಂಗೀತ ಪದ್ಧತಿಯ ಮುಖ್ಯರಚನಕಾರರಲ್ಲಿ ಒಬ್ಬರು. ಮುತ್ತುಸ್ವಾಮಿ ದೀಕ್ಷಿತ ಮತ್ತು ಶ್ಯಾಮಾಶಾಸ್ತ್ರಿ ಇವರ ಜೊತೆಯಲ್ಲಿ ಕರ್ನಾಟಕ ಸಂಗೀತದ ತ್ರಿಮೂರ್ತಿಗಳಲ್ಲಿ ಒಬ್ಬರು. ಅವರು ಶ್ರೀರಾಮನ ಪರಮ ಭಕ್ತರಾಗಿದ್ದರು. ಭಕ್ತಿ–ಭಾವ–ಗೇಯಗಳೆಲ್ಲದರಲ್ಲೂ ಅದ್ವಿತೀಯ ಎನಿಸಿದ ರಚನೆಗಳನ್ನು ನೀಡಿದ ಇವರು ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ಅಜರಾಮರವಾಗಿದ್ದಾರೆ.

**ಜನನ**

ಮೇ 4, 1767 (ಕೆಲವು ಚರಿತ್ರಜ್ಞರ ಪ್ರಕಾರ 1759) ರಲ್ಲಿ ತಂಜಾವೂರು ಜಿಲ್ಲೆಯ ತಿರುವಾಂಕೂರಿನಲ್ಲಿ ರಾಮಬ್ರಹ್ಮಮ್ ಮತ್ತು ಸೀತಮ್ಮನವರ ಪುತ್ರರಾಗಿ ತ್ಯಾಗರಾಜರು ಜನಿಸಿದರು. ಇವರ ಅಜ್ಜಗಿರಿರಾಜ ಕವಿ ತಂಜಾವೂರಿನ ಆಸ್ಥಾನದಲ್ಲಿ ಕವಿ–ಸಂಗೀತಗಾರರಾಗಿದ್ದರು. ತ್ಯಾಗರಾಜರ ಮೊದಲ ಪತ್ನಿ ಪಾರ್ವತಮ್ಮ ಇವರ ನಿಧನದ ನಂತರ ಕಮಲಾಂಬಾರನ್ನು ಮದುವೆಯಾದರು.

**ಸಂಗೀತದ ಶಿಕ್ಷಣ**

ತ್ಯಾಗರಾಜರು ಸಂಗೀತದ ಮೊದಲ ಶಿಕ್ಷಣವನ್ನು ಶ್ರೀ ಸೊಂಟ ವೆಂಕಟರಮಣಯ್ಯನವರಿಂದ ಪಡೆದರು. ದೇವರನ್ನು ಅನುಭವಿಸುವ ದಾರಿಯಾಗಿ ಸಂಗೀತವನ್ನು ಕಂಡ ತ್ಯಾಗರಾಜರು ಭಾವಪೂರ್ಣ ಸಂಗೀತಕ್ಕೆ ರಾಗ ಮತ್ತು ತಾಳ–ಬದ್ಧ ಸಂಗೀತಕ್ಕಿಂತ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿದವರು. 13ನೆಯ ವಯಸ್ಸಿನಲ್ಲಿಯೇ ತಮ್ಮ ಕೃತಿಗಳಲ್ಲಿ ಒಂದಾದ ನಮೋ ನಮೋ ರಾಘವವನ್ನು ರಚಿಸಿದರು. ಇವರ ಎಂದರೋ ಮಹಾನುಭಾವುಲು ಕೃತಿಯನ್ನು ಕೇಳಿದ ನಂತರ ಸೊಂಟಿ ವೆಂಕಟರಮಣಯ್ಯನವರು ತಂಜಾವೂರಿನ ರಾಜರಿಗೆ ಇವರ ಬಗ್ಗೆ ಪ್ರಭಾವೀ ಸಲಹೆ ನೀಡಿದರು. ಆದರೆ ತ್ಯಾಗರಾಜರು ಮಹಾರಾಜರ ಆಸ್ಥಾನ ಸಂಗೀತಗಾರರಾಗುವ ಆಹ್ವಾನವನ್ನು ನಿರಾಕರಿಸಿದರು. ಅವರು ಶ್ರೀ ನಾರದರಿಂದ ತಮ್ಮ ಸಂಗೀತದ ಪಾಂಡಿತ್ಯಕ್ಕಾಗಿ ಆಶೀರ್ವಾದವನ್ನು ಪಡೆದ ಸಂದರ್ಭದಲ್ಲಿ ಶ್ರೀ ನಾರದ ಮುನಿ ಕೃತಿಯನ್ನು ಹಾಡಿದರು ಎಂಬ ನಂಬಿಕೆ.

**ದೇಹಾಂತ್ಯ**

ತ್ಯಾಗರಾಜರ ದೇಹಾಂತ್ಯ ಆದದ್ದು 1846 ರಜನವರಿ 6 ರಂದು. ಆ ದಿನ ಹಿಂದೂ ಪಂಚಾಂಗದ ಪ್ರಕಾರ ಪುಷ್ಯ ಬಹುಳ ಪಂಚಮಿಯ ದಿನ. ಕರ್ನಾಟಕ ಸಂಗೀತಕ್ಕೆ ತ್ಯಾಗರಾಜರ ಕಾಣಿಕೆಯ ನೆನಪಾಗಿ ಪ್ರತಿವರ್ಷತಿರುವಯ್ಯಾರಿನಲ್ಲಿ ಆ ದಿನದಂದು ತ್ಯಾಗರಾಜ ಆರಾಧನೆ ಉತ್ಸವ ನಡೆಯುತ್ತದೆ. ಅವರು ಬದುಕಿ ಬಾಳಿದ ಕಾವೇರಿ ತೀರದ ತಿರುವಯ್ಯಾರಿನಲ್ಲಿ ನಡೆಯುವ ಆರಾಧನಾ ಮಹೋತ್ಸವದಲ್ಲಿ ಭಕ್ತಿಸಂಗೀತದ ವಾಂಧಿ ಉಕ್ಕಿ ಹರಿಯುತ್ತದೆ. ಕನ್ನಡಿಗರಿಗೆ ಇನ್ನೂ ಹತ್ತಿರವಾದ ಕಾವೇರಿಯ ಮಡಿಲಿನ ಶ್ರೀರಂಗಪಟ್ಟಣದಲ್ಲಿಯೂ ವಿಜೃಂಭಣೆಯಿಂದ ತ್ಯಾಗರಾಜರ ಆರಾಧನೆ ನಡೆಯುತ್ತದೆ.

**ಪುರಂದರದಾಸರ ಪ್ರಭಾವ**

ತ್ಯಾಗರಾಜರು ಚಿಕ್ಕಂದಿನಲ್ಲಿ ಅವರ ತಾಯಿ ಹಾಡುತ್ತಿದ್ದ ಪುರಂದರದಾಸರ ದೇವರ ನಾಮಗಳಿಂದ ಪ್ರಭಾವಿತರಾಗಿದ್ದರೆಂದು ಹೇಳಲಾಗಿದೆ. ಇವರ ಹಲವು ಕೃತಿಗಳು ಪುರಂದರದಾಸರ ಕೆಲವು ಪದಗಳಲ್ಲಿ ಇರುವ ಭಾವನೆಯನ್ನೇ ವ್ಯಕ್ತಪಡಿಸುವುದು ಗಮನಾರ್ಹ. ಉದಾಹರಣೆಗೆ ರೇವಗುಪ್ತಿರಾಗದ ಗ್ರಹಬಲಮೇಮಿ ಎಂಬ ಕೃತಿ ಪುರಂದರ ಸಕಲ ಗ್ರಹಬಲ ನೀನೆ ಎಂಬ ರಚನೆಯನ್ನು ಹೋಲುತ್ತಿದ್ದರೆ, ಜಿಂಗಲರಾಗದ ಅನಾಥುಡನುಗಾನು ಎಂಬ ರಚನೆ ಪುರಂದರದಾಸರ ನಿನ್ನಂಥ ತಾಯಿ ಎನಗುಂಟು ನಿನಗಿಲ್ಲ ಎಂಬ ಉಗಾಭೋಗದ ಭಾವನೆಯನ್ನೇ ಹೇಳುತ್ತದೆ. ತ್ಯಾಗರಾಜರು ಅವರ ಪ್ರಹ್ಲಾದಭಕ್ತಿ ವಿಜಯದ ಮಂಗಳ ಶ್ಲೋಕದಲ್ಲಿ ಪುರಂದರದಾಸರನ್ನು ಸ್ಮರಿಸಿದ್ದಾರೆ.

**– ಯಶಸ್ವಿನಿ ಪಂಡಿತ್**
ಅಂತಿಮ ವರ್ಷದ ಬಿಎ ವಿದ್ಯಾರ್ಥಿನಿ



**ಇತಿಹಾಸ ವಿಭಾಗ, ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ ಮತ್ತು ಐಕ್ಯೂಎಸಿ ಘಟಕಗಳ ಸಹಯೋಗದಲ್ಲಿ**
**ಉಪನ್ಯಾಸ ಮತ್ತು ಸಂವಾದ: 'ಮರೆತು ಹೋದ ಮೈಸೂರಿನ ಇತಿಹಾಸ ಹಾಗೂ ಪ್ರಾತಸ್ಮರಣೀಯರು'**
**ಸಂಪನ್ಮೂಲ ವ್ಯಕ್ತಿ ಇತಿಹಾಸ ತಜ್ಞರಾದ ಶ್ರೀ ಎ.ಎಸ್. ಧರ್ಮೇಂದ್ರಕುಮಾರ್ – 27.5.2023**





**ಉತ್ತಮ ವಿಚಾರ** ಮಹಾಜನ ಕಾಲೇಜಿನಲ್ಲಿ ಸಮಾರಂಭ ಆಯೋಜನೆ

# ಉಪನ್ಯಾಸ, ಸಂವಾದ ಕಾರ್ಯಕ್ರಮ

• **ಕನ್ನಡಪ್ರಭ ವಾರ್ತೆ** ಮೈಸೂರು

ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗ, ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ ಮತ್ತು ಐಕ್ಯೂಎಸಿ ಘಟಕಗಳ ಸಹಯೋಗದಲ್ಲಿ ಮರೆತು ಹೋದ ಮೈಸೂರಿನ ಇತಿಹಾಸ ಹಾಗೂ ಪ್ರಾತಸ್ಮರಣೀಯರು ಎಂಬ ವಿಷಯ ಕುರಿತು ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮ ನಡೆಯಿತು.

ಸಂಪನ್ಮೂಲ ವ್ಯಕ್ತಿಗಳಾಗಿ ಇತಿಹಾಸ ತಜ್ಞ ಎ.ಎಸ್ .ಧರ್ಮೇಂದ್ರಕುಮಾರ್ ಅವರು ತಮ್ಮ ಉಪನ್ಯಾಸದಲ್ಲಿ ಮೈಸೂರು ಮಹಾರಾಜರ ಕಾಲದಲ್ಲಾದ ಇಂಗ್ಲಿಷ್ ಶಿಕ್ಷಣ ಪ್ರಚಾರ, ವಯಸ್ಕರ ಶಾಲೆಗಳು, ಅಂಧ ಶಾಲೆಗಳು, ಪಾರಂಪರಿಕ ಕಟ್ಟಡಗಳು ಹಾಗೂ ಐತಿಹಾಸಿಕ ನೆಲೆಗಳ ಮಹತ್ವವನ್ನು ಹಾಗೂ ಸದಾಕಾಲ ಪ್ರಜಾಕಲ್ಯಾಣವನ್ನೇ ಬಯಸಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಹಲವಾರು ಜನೋಪಯೋಗಿ ಕಾರ್ಯಗಳನ್ನು ಮಾಡುವ ಮೂಲಕ ಆಧುನಿಕ ಮೈಸೂರಿನ ಶಿಲ್ಪಿ ಎಂದು ಪ್ರಶಂಸಿಸಿದರು. ಜೊತೆಗೆ ಅಂದಿನ ದಿವಾನರಾದ ಸರ್.ಎಂ. ವಿಶ್ವೇಶ್ವರಯ್ಯ, ದಿವಾನ್ ಪೂರ್ಣಯ್ಯ, ಸರ್ ಮಿರ್ಜಾ ಇಸ್ಮಾಯಿಲ್, ಅಲಿಅಸ್ಗರ್ ಮುಂತಾದ ಪ್ರಾತಸ್ಮರಣೀಯರು ನೀಡಿದ ಅಮೂಲ್ಯ ಕೊಡುಗೆಗಳನ್ನು ಸ್ಮರಿಸಿದರು. ಅಂದಿನ ದಸರಾ ಹಬ್ಬದ ನೆನಪುಗಳು, ಕೆಲವು ಐರೋಪ್ಯ ವಿದ್ವಾಂಸರು



ಮೈಸೂರು ಸಂಸ್ಥಾನದ ಇತಿಹಾಸ ಸಂಸ್ಕೃತಿ, ಭಾಷೆಗೆ ನೀಡಿದ ಕೊಡುಗೆಗಳನ್ನು ಶ್ಲಾಘಿಸಿದರು.

ವಿದೇಶಗಳಲ್ಲಿ ಕನ್ನಡಿಗರಿಗೆ ಸಿಗುವ ಮಹತ್ವ ಹಾಗೂ ಗೌರವವನ್ನು ಸ್ಮರಿಸಿದರು. ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುತ್ತಾ, ಸನಾತನ ನೈಜ ಇತಿಹಾಸ, ಸಂಸ್ಕೃತಿ, ಪರಂಪರೆಯ ರಕ್ಷಣೆಯಲ್ಲಿ ತಮ್ಮ ಜವಾಬ್ದಾರಿಯನ್ನು ಮನವರಿಕೆ ಮಾಡಿಕೊಟ್ಟು, ಅವರ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರ ನೀಡಿದರು. ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಭಾಷೆ ಹಾಗೂ ಕೌಶಲ್ಯಗಳ ಅನಿವಾರ್ಯತೆಯ ಬಗ್ಗೆ ವಿವರಿಸಿದರು. ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲೆ ಡಾ.ಬಿ.ಆರ್ .ಜಯಕುಮಾರಿ ವಿದ್ಯಾರ್ಥಿಗಳಿಗೆ ಶುಭ ಸಂದೇಶ ನೀಡಿದರು. ಕಾಲೇಜಿನ ಸಿಇಒ ಡಾ. ಎಸ್.ಆರ್. ರಮೇಶ್, ಶೈಕ್ಷಣಿಕ ಡೀನ್ ಹಾಗೂ ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಶಮಿಕಾ ಶ್ರೀಹರಿ ಮತ್ತು ವಿಭಾಗಗಳ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಇದ್ದರು.




## Our college Civil Service aspirants attended one day Works shop on Compitative Exams organised by UoM & Negilayogi Vidyavardhaka Spardha Kendra, Mysuru - 12.4.2023







## Online Webinar 'How to Crack UPSC Exams' by Unacademy, Bengaluru - 26.5.2023







**Departments of History, Commerce, Entry to Service & IQAC**
**in Association with Gurudeva IAS - KAS Academy, Dharwad**
**Workshop on 'How to Crack Banking Exams' - 8.6.2023**













**Department of EVS, VoMC, NSS, NCC & Student Parliament Members Participated in 'Clean Drive Abhiyana' organised by Indian Industrial Federation & Mysuru City Corporation - 4.6.2023**















# Radiant Sports Mysuru, Organised Half Marathon & 10K on 18.6.2023 Volunteers of Mahajana Corps, NCC & NSS Volunteers are Participated in this Event.






ಶಿಕ್ಷಣದಿಂದ ಶ್ರೇಷ್ಠತೆ

**ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು (ಸ್ವಾಯತ್ತ)**

ಜಯಲಕ್ಷ್ಮೀಪುರಂ, ಮೈಸೂರು–12

ಶ್ರೇಷ್ಠತೆಯ ಸಾಮರ್ಥ್ಯವುಳ್ಳ ಕಾಲೇಜು

**ಇತಿಹಾಸ ವಿಭಾಗ**

**Dept. of History**

**ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೊಂಡು, ನ್ಯಾಕ್‌ನಿಂದ 'ಎ' ಮಾನ್ಯತೆ ಪಡೆದಿದೆ.**




**ಸಂಚಿಕೆ: 39 ಅಕ್ಟೋಬರ್ 2023** | ಪ್ರಧಾನ ಸಂಪಾದಕರು: ಡಾ. ಬಿ.ಆರ್. ಜಯಕುಮಾರಿ, ಪ್ರಾಂಶುಪಾಲರು | **www.mahajana.edu.in** | ಸಂಪಾದಕರು: ಡಾ. ಶ್ರೀಧರ ಹೆಚ್, ಇತಿಹಾಸ ವಿಭಾಗ | **ಪುಟಗಳು: 10**

**ಸಂಪಾದಕೀಯ**

# ಹೊಯ್ಸಳ ದೇಗುಲಗಳಿಗೆ ವಿಶ್ವ ಪರಂಪರೆ ಮಾನ್ಯತೆ

## ಬೇಲೂರು, ಹಳೇಬೀಡು, ಸೋಮನಾಥಪುರ ಯುನೆಸ್ಕೋ ಪಾರಂಪರಿಕ ಪಟ್ಟಿಗೆ ಸೇರ್ಪಡೆ

ವಾಸ್ತುಶಿಲ್ಪದ ವೈಭವಕ್ಕೆ ಹೆಸರುವಾಸಿಯಾಗಿರುವ ಕರ್ನಾಟಕದ ಬೇಲೂರು, ಹಳೇಬೀಡು ಮತ್ತು ಸೋಮನಾಥಪುರದ ಪ್ರಾಚೀನ ಹೊಯ್ಸಳರ ದೇವಾಲಯಗಳನ್ನು ಯುನೆಸ್ಕೋ ವಿಶ್ವ ಪರಂಪರೆಯ ಪಟ್ಟಿಗೆ ಸೇರ್ಪಡೆ ಮಾಡಲಾಗಿದೆ.ಇದರಿಂದ ಕರ್ನಾಟಕದ ವಾಸ್ತುಶಿಲ್ಪದ ವೈಭವದ ಕಿರೀಟಕ್ಕೆ ಮತ್ತೊಂದು ಗರಿ ಸೇರಿದಂತಾಗಿದೆ.ಪ್ರಸ್ತುತ ಸೌದಿ ಅರೇಬಿಯಾದ ರಿಯಾದ್‌ನಲ್ಲಿ ನಡೆಯುತ್ತಿರುವ ವಿಶ್ವಪರಂಪರೆ ಸಮಿತಿ 45ನೇ ಅಧಿವೇಶನದಲ್ಲಿ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ.ಈ ಮೂಲಕ ಭಾರತದಲ್ಲಿ ಯುನೆಸ್ಕೋ ವಿಶ್ವ ಪರಂಪರೆಯ ತಾಣಗಳ ಸಂಖ್ಯೆ 42ಕ್ಕೆ ಏರಿದಂತಾಗಿದೆ.

ಇವು ಭಾರತದ ವಾಸ್ತುಶಿಲ್ಪದ ಪ್ರತಿಭೆಗಳು ಎಂದು ಭಾರತೀಯ ಪುರಾತತ್ವ ಸಮೀಕ್ಷೆ (ಎಎಸ್ಐ) ತಿಳಿಸಿದೆ.ಈಗಾಗಲೇ ವಿಜಯನಗರ ಜಿಲ್ಲೆಯ (ಅಂದಿನ ಬಳ್ಳಾರಿ ಜಿಲ್ಲೆ) ಹಂಪಿ ವಿಶ್ವ ಪರಂಪರೆ ಪಟ್ಟಿಯಲ್ಲಿದೆ.

### ಭವ್ಯವಾದ ದೇವಾಲಯಗಳು

ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯ, ಬೇಲೂರಿನ ಚನ್ನಕೇಶವ ದೇವಾಲಯ ಮತ್ತು ಸೋಮನಾಥಪುರದ ಕೇಶವ ದೇವಾಲಯಗಳು ಅದ್ಭುತವಾದ ವಾಸ್ತುಶಿಲ್ಪ ಮತ್ತು ಕಲಾತ್ಮಕ ಸೃಜನಶೀಲತೆಯನ್ನು ಪ್ರತಿಬಿಂಬಿಸುತ್ತವೆ. ಕರ್ನಾಟಕದ ಈ ಮೂರೂ ದೇಗುಲಗಳನ್ನು ಒಟ್ಟುಗೂಡಿಸಿ 'ಹೊಯ್ಸಳರ ಪವಿತ್ರ ಸಮಗ್ರ ವಾಸ್ತುಶಿಲ್ಪಗಳು' ಹೆಸರಿನಲ್ಲಿ 2022 ರಲ್ಲಿ ಯುನೆಸ್ಕೋ ವಿಶ್ವಪರಂಪರೆ ಪಟ್ಟಿಗೆಂದು ನಾಮನಿರ್ದೇಶನ ಮಾಡಲಾಗಿತ್ತು. ಅದಕ್ಕೀಗ ಮನ್ನಣೆ ಸಿಕ್ಕಿದೆ.

### ಮೋದಿ, ಶಾ, ಗಣ್ಯರ ಹರ್ಷ

ಇದರ ಬೆನ್ನಲ್ಲೇ ಪ್ರಧಾನಿ ನರೇಂದ್ರ ಮೋದಿ ಟ್ವೀಟ್ ಮಾಡಿ, 'ಭಾರತಕ್ಕೆ ಮತ್ತೊಂದು ಹೆಮ್ಮೆ. ಹೊಯ್ಸಳರ ಭವ್ಯ ಮತ್ತು ಪವಿತ್ರ ಶಿಲ್ಪ ಸಂಕೀರ್ಣಗಳನ್ನು ಯುನೆಸ್ಕೋ ವಿಶ್ವಪಾರಂಫರಿಕ ಸ್ಥಳಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ಹೊಯ್ಸಳ ದೇವಾಲಯಗಳ ಕಲಾತೀತ ಸೌಂದರ್ಯ ಮತ್ತು ಸೂಕ್ಷ್ಮ ಕುಸುರಿ ಕೆಲಸಗಳು ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಮತ್ತು ನಮ್ಮ ಪೂರ್ವಿಕರ ಅಸಾಧಾರಣ ಶಿಲ್ಪ ಕೌಶಲ್ಯಕ್ಕೆ ಸಾಕ್ಷಿಯಾಗಿವೆ' ಎಂದಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಕೂಡ ಹರ್ಷ ವ್ಯಕ್ತಪಡಿಸಿ, 'ಬೇಲೂರು, ಹಳೇಬೀಡು ಮತ್ತು ಸೋಮನಾಥಪುರದ ಹೊಯ್ಸಳ ದೇವಾಲಯಗಳು ದೇಶದ ಕರಕುಶಲತೆಯ ಪರಾಕಾಷ್ಠೆಯ ದ್ಯೋತಕವಾಗಿವೆ' ಎಂದಿದ್ದಾರೆ. ಭಾನುವಾರವಷ್ಟೆ ಕವಿ ರವೀಂದ್ರನಾಥ ಠಾಗೋರ್ ಅವರು ನಿರ್ಮಿಸಿದ್ದ ಪಶ್ಚಿಮ ಬಂಗಾಳದ ವಿಶ್ವಭಾರತಿ, ವಿಶ್ವಪರಂಪರೆ ಪಟ್ಟಿಯಲ್ಲಿ ಸ್ಥಾನ ಪಡೆದಿತ್ತು.ಅದಾದ ನಂತರ ಕರ್ನಾಟಕದ 3 ಹೊಯ್ಸಳ ವಾಸ್ತುಶಿಲ್ಪ ತಾಣಗಳಿಗೆ ಈ ಕೀರ್ತಿ ಸಂದಿದ್ದು ವಿಶೇಷ.

ಇನ್ನು 'ಒಳ್ಳೆಯ ಸುದ್ದಿಗಳು ಬರುತ್ತಲೇ ಇರುತ್ತವೆ. ನಮ್ಮ ಸಾಂಪ್ರದಾಯಿಕ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಅರ್ಹವಾದ ಮನ್ನಣೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಹಾಗೂ ಕೇಂದ್ರ ಸಚಿವ ಜಿ.ಕಿಶನ್ ರೆಡ್ಡಿ ಟ್ವೀಟ್ ಮಾಡಿದ್ದಾರೆ.

**2014 ರಿಂದ ತಾತ್ಕಾಲಿಕ ಪಟ್ಟಿಯಲ್ಲಿದ್ದವು:** 'ಹೊಯ್ಸಳರ ಪವಿತ್ರ ಸಮಗ್ರ ಕಲೆಗಳು' ಎಂದೇ ಖ್ಯಾತಿ ಪಡೆದಿರುವ ಬೇಲೂರು, ಹಳೇಬೀಡು ಹಾಗೂ ಸೋಮನಾಥಪುರದ ದೇವಾಲಯಗಳು 2014 ಏಪ್ರಿಲ್‌ನಿಂದ ಯುನೆಸ್ಕೋದ ತಾತ್ಕಾಲಿಕ ಪಟ್ಟಿಯಲ್ಲಿದ್ದವು. ಭಾರತವು ಇದನ್ನು 2022–23ರ ವಿಶ್ವ ಪರಂಪರೆಯ ಪರಿಗಣನೆಗೆ ನಾಮನಿರ್ದೇಶನವಾಗಿ ಕಳುಹಿಸಿತ್ತು.

'ಈ ದೇವಾಲಯಗಳು ಉತ್ತರ, ಮಧ್ಯ ಮತ್ತು ದಕ್ಷಿಣ ಭಾರತದಲ್ಲಿ ಪ್ರಚಲಿತದಲ್ಲಿರುವ ನಾಗರ ಮತ್ತು ದ್ರಾವಿಡ ಶೈಲಿಗಳ ಸಮ್ಮಿಶ್ರಣವಾಗಿವೆ' ಎಂದು ಎಎಸ್ಐ ಬಣ್ಣಿಸಿದೆ.

**– ಡಾ. ಶ್ರೀಧರ ಹೆಚ್**
ಶೈಕ್ಷಣಿಕ ಡೀನ್
ಹಾಗೂ
ಮುಖ್ಯಸ್ಥರು, ಇತಿಹಾಸ ವಿಭಾಗ



## ವಿದ್ಯಾಸಾಗರಕ್ಕೆ ಅನ್ವರ್ಥ ಈ ಈಶ್ವರಚಂದ್ರ

ಬಂಗಾಳದಲ್ಲಿ ಈಶ್ವರಚಂದ್ರ ಹೆಸರಿಗೆ ಕಲ್ಕತ್ತ ಸಂಸ್ಕೃತ ಕಾಲೇಜು ನೀಡಿದ ವಿದ್ಯಾಸಾಗರ ಬಿರುದು ಸೇರಿ 'ಈಶ್ವರ ಚಂದ್ರ ವಿದ್ಯಾಸಾಗರ' ಎಂಬ ಹೆಸರು ಬಳಕೆಯಲ್ಲಿದೆ. ಇವರ ವಿನಯಪೂರ್ಣ ನಡವಳಿಕೆ ಬಹಳ ಪ್ರಸಿದ್ಧವಾದುದು.

ಬರಹಗಾರರಾಗಿ, ಸಮಾಜ ಸುಧಾರಕರಾಗಿ, ಪ್ರಾಧ್ಯಾಪಕರಾಗಿ ಹೆಸರು ಗಳಿಸಿದವರು. 1820 ರಿಂದ 1891 ರವರೆಗೆ ಜೀವಿಸಿದ್ದ ವಿದ್ಯಾಸಾಗರರು ರಾಮಕೃಷ್ಣ ಪರಮಹಂಸರಿಗೆ ಪ್ರಿಯರಾಗಿದ್ದರು. ಪರಮಹಂಸರ ಜನ್ಮಭೂಮಿ ಹೂಗ್ಲಿ ಜಿಲ್ಲೆಯಲ್ಲಿರುವ ಕಾಮಾರಕಪುರ, ಅದರ ಹತ್ತಿರದಲ್ಲಿರುವ ವೀರಸಿಂಗ್ ಎಂಬ ಗ್ರಾಮದಲ್ಲೇ ಈಶ್ವರಚಂದ್ರ ವಿದ್ಯಾಸಾಗರರು ಸೆಪ್ಟೆಂಬರ್ 26, 1820 ರಂದು ಜನ್ಮ ತಳೆದರು.

ಶ್ರೀ ರಾಮಕೃಷ್ಣ 'ವಚನವೇದ'ದಲ್ಲಿ ಸ್ವಯಂ ಶ್ರೀರಾಮಕೃಷ್ಣ ಪರಮಹಂಸರೇ ಈಶ್ವರಚಂದ್ರ ವಿದ್ಯಾಸಾಗರರನ್ನು ಕಾಣಬೇಕೆಂದು ಇಚ್ಛೆಪಟ್ಟು ಅವರ ಮನೆಗೆ ಹೋಗಿ ಸಂಭಾಷಿಸಿದ ಘಟನೆಗಳ ವರ್ಣನೆ ಇದೆ. ಈಶ್ವರಚಂದ್ರರನ್ನು ಕಂಡೊಡನೆಯೇ ಶ್ರೀರಾಮಕೃಷ್ಣರು ನುಡಿಯುತ್ತಾರೆ: "ಅಹ! ಇಂದು ಸಾಗರಕ್ಕೆ ಬಂದು ಸೇರಿಬಿಟ್ಟಿದ್ದೇನೆ.

ಇಲ್ಲಿಯವರೆಗೆ ಕಾಲುವೆ, ಜೌಗು ಭೂಮಿ, ಅತಿ ಹೆಚ್ಚೆಂದರೆ ನದಿ ಇವನ್ನು ನೋಡಿದ್ದೆ. ಆದರೆ ಇಂದು ಸಾಗರವೇ ನನ್ನ ಕಣ್ಣೆದುರಿಗೆ!".ಶ್ರೀರಾಮಕೃಷ್ಣರೊಡನೆ ಅವರ ಮಾತುಕತೆಗಳು ಅಧ್ಯಾತ್ಮದ ಆಳದ ಜೊತೆಗೆ ವಿನೋದಪೂರ್ಣವಾಗಿಯೂ, ವಿದ್ವತ್ಪೂರ್ಣವಾಗಿಯೂ ಇವೆ.

ಈಶ್ವರಚಂದ್ರ ವಿದ್ಯಾಸಾಗರರು ವಿದ್ಯಾವಂತರು, ಶಿಕ್ಷಣ ಸಮರ್ಥರು, ಬರಹಗಾರರು, ಪರೋಪಕಾರಿ ಮುಂತಾಗಿ ಪ್ರಸಿದ್ಧಿ ಪಡೆದಿದ್ದವರು. ಆಧುನಿಕ ಬಂಗಾಳಯನ್ನು ಪೋಷಿಸಿದವರಲ್ಲಿ ಅವರು ಪ್ರಮುಖರು. ಸಂಸ್ಕೃತ ವ್ಯಾಕರಣದಲ್ಲಿ ಮತ್ತು ಪದ್ಯಕಾವ್ಯದಲ್ಲಿ ಮಹಾಪಂಡಿತರು. ಬೇತಾಳ್ ಪಂಚಬಿನ್ನತಿ, ಬಂಗಾಲ್ ಇತಿಹಾಸ್, ಜೀಬನ್ ಚರಿತ್, ಬೋಧಡೋಯ್, ಉಪಕ್ರಮಣಿಕ, ಶಾಕುಂತಲ, ಬಾಮಾ ಪರಿಚಯ್, ಖುಜುಪತ್, ಸಂಸ್ಕೃತ ವ್ಯಾಕರಣ, ಉಪಕ್ರಮಣಿಕ, ವ್ಯಾಕರಣ ಕೌಮುದಿ ಮುಂತಾದ ಅನೇಕ ವಿದ್ವತ್ಪೂರ್ಣ ಕೃತಿಗಳನ್ನು ಅವರು ರಚಿಸಿದ್ದರು.

ಈಶ್ವರಚಂದ್ರ ವಿದ್ಯಾಸಾಗರರು ವಿಧವಾ ವಿವಾಹಗಳನ್ನು ಪ್ರೋತ್ಸಾಹಿಸಿದರು. ಹಿಂದೂಧರ್ಮದಲ್ಲಿ ಅನಿರ್ಬಂಧಿತ ಬಹುಪತ್ನಿತ್ವವು ಶಾಸ್ತ್ರಸಮ್ಮತವಾದದ್ದು ಎಂಬ ನಂಬಿಕೆಗಳಲ್ಲಿ ಯಾವುದೇ ಹುರುಳಿಲ್ಲ ಎಂಬುದನ್ನು ಸ್ಪಷ್ಟಪಡಿಸಿ ಜನರಲ್ಲಿ ಆ ಕುರಿತಾಗಿ ಮನೆ ಮಾಡಿದ್ದ ಮೂಢನಂಬಿಕೆಗಳ ಬಗ್ಗೆ ತಿಳುವಳಿಕೆ ನೀಡಲು ಶ್ರಮಿಸಿದರು.

ಈಶ್ವರಚಂದ್ರರ ಔದಾರ್ಯ ಅವರ ಹೆಸರನ್ನು ಮನೆಮಾತಾಗಿಸಿ ಬಿಟ್ಟಿಸಿತ್ತು. ಅವರ ಆದಾಯದ ಬಹುಭಾಗ ವಿಧವೆಯರ, ಅನಾಥರ, ದಿಕ್ಕಿಲ್ಲದವರ, ದರಿದ್ರರ, ಇನ್ನೂ ಬೇರೆ ಬೇರೆ ಕಷ್ಟದಲ್ಲಿರುವವರ ಕಣ್ಣೀರು ಒರೆಸಲು ಹೋಗುತ್ತಿತ್ತು. ಅವರ ಸಹಾನುಭೂತಿ ಮಾನವ ಕುಲದ ಎಲ್ಲೆಯೊಳಗೆ ನಿಂತಿರಲಿಲ್ಲ. ಕರುಗಳಿಗೆ ಹಾಲು ದೊರಕಲಿ ಎಂದು ಅನೇಕ ವರ್ಷಗಳ ಕಾಲ ಅವರು ಹಾಲನ್ನೆ ಕುಡಿಯಲಿಲ್ಲ. ಕುದುರೆಗಳಿಗೆ ಕಷ್ಟಕೊಡಬೇಕಾಗುತ್ತದೆಂದು ಗಾಡಿಯನ್ನೆ ಹತ್ತುತ್ತಿರಲಿಲ್ಲ.

### ಸ್ವಾತಂತ್ರ್ಯ ಪ್ರೇಮಿ ಈಶ್ವರ

ಮೇಲಧಿಕಾರಿಗಳೊಡನೆ ಭಿನ್ನಾಭಿಪ್ರಾಯ ಬೆಳೆದುದರಿಂದ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲ್ ಪದವಿಯನ್ನೆ ತ್ಯಾಗ ಮಾಡಿ ಬಿಟ್ಟರು.ತಮ್ಮ ತಾಯಿಯನ್ನು ಕಂಡರೆ ಅವರಿಗೆ ಬಹಳ ಪ್ರೀತಿ. ತಾನು ತಮ್ಮ ತಮ್ಮನ ವಿವಾಹ ಸಮಯದಲ್ಲಿ ಹಾಜರಿರುವೆನೆಂದು ತಾಯಿಗೆ ವಾಗ್ದಾನ ಮಾಡಿದ್ದುದರಿಂದ ಯಾವ ಪ್ರಾಣಾಪಾಯಕ್ಕೂ ಹೆದರದೆ, ದೋಣಿ ಸಿಕ್ಕದೆ ಹೋದುದರಿಂದ ಹೆಚ್ಚು ಪ್ರವಾಹ ಬಂದಿದ್ದ ದಾಮೋದರಾ ನದಿಯನ್ನೆ ಈಜಿ ದಾಟಿ ತಮ್ಮ ಮಾತನ್ನು ಉಳಿಸಿಕೊಂಡರು. ಆತ ಸರಳತೆಯ ಮೂರ್ತಿಯೇ ಆಗಿದ್ದರು. ವಿದ್ಯಾಸಾಗರ ಎಂಬ ಹೆಸರಿಗೆ ತಕ್ಕಂತೆ ಅವರು ವಿದ್ಯೆಯ ಸಾಗರವೇ ಆಗಿದ್ದರು.

ಕಲ್ಕತ್ತೆಯ ಸಂಸ್ಕೃತ ಕಾಲೇಜಿನಲ್ಲಿ ವ್ಯಾಕರಣ ಬೋಧನೆ ಮಾಡುವ ಪಂಡಿತರ ಅವಶ್ಯಕತೆ ಇತ್ತು. ಈ ಹುದ್ದೆಗೆ ಈಶ್ವರಚಂದ್ರರ ಹೆಸರನ್ನು ಸೂಚಿಸಲಾಗಿತ್ತು. ಆಗ ಅವರು ಬೇರೆ ಕಡೆ ಶಿಕ್ಷಕರಾಗಿ ತಿಂಗಳಿಗೆ ರೂ.50/– ವೇತನ ಪಡೆಯುತ್ತಿದ್ದರು. ಇಲ್ಲಿ ಅವರಿಗೆ ರೂ. 90/ – ರೂಪಾಯಿಗಳ ಸಂಬಳ ನೀಡುವುದಾಗಿ ತಿಳಿಸಲಾಗಿತ್ತು. ಆಗಿನ ಕಾಲಕ್ಕೆ ಅದು ಉತ್ತಮ ವೇತನ.

ವಿದ್ಯಾಸಾಗರರಿಗೆ ಹಣದ ಅವಶ್ಯಕತೆಯೂ ತುಂಬಾ ಇತ್ತು.ಆದರೆ ವಿದ್ಯಾಸಾಗರರು ಮಾಡಿದ್ದೇ ಬೇರೆ.ಅವರ ಪರಿಚಿತರೊಬ್ಬರು ಜೀವನದಲ್ಲಿ ತೊಂದರೆಯಲ್ಲಿದ್ದು ತಮಗಿಂತಲೂ ಹೆಚ್ಚಿನ ವ್ಯಾಸಂಗ ಮಾಡಿದ್ದವರಾದ್ದರಿಂದ ಅವರನ್ನೇ ಈ ಹುದ್ದೆಗೆ ನೇಮಕ ಮಾಡಿಕೊಳ್ಳುವುದು ಸೂಕ್ತ ಎಂದು ಸಲಹೆ ಮಾಡಿದ್ದಲ್ಲದೇ, ತಮ್ಮ ಪ್ರಸ್ತಾಪಕ್ಕೆ ಆಡಳಿತ ಮಂಡಳಿಯನ್ನೂ ಒಪ್ಪಿಸಿದರು.

ಸ್ನೇಹಿತನ ನಿರಹಂಕಾರ ಪ್ರವೃತ್ತಿಯನ್ನೂ ಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ಗುಣವನ್ನೂ ನೋಡಿ ತರ್ಕವಾಚಸ್ಪತಿ ಆಶ್ಚರ್ಯಪಟ್ಟರು. 'ವಿದ್ಯಾಸಾಗರ, ನೀನು ಮನುಷ್ಯ ಮಾತ್ರವಲ್ಲಯ್ಯ, ನೀನು ಖಂಡಿತವಾಗಿ ಮಾನವರೂಪಿ ದೇವನೇ ಹೌದು' ಎಂದು ಉದ್ಗರಿಸಿದರು. ಕೊನೆಯವರೆಗೂ ಅವರು ವಿದ್ಯಾಸಾಗರರ ಸಹಾಯವನ್ನು ಸ್ಮರಿಸುತ್ತಾ ಉತ್ತಮ ಅಧ್ಯಾಪಕರಾಗಿ ಹೆಸರು ಗಳಿಸಿದರು.

ಹೀಗೆ ಈಶ್ವರಚಂದ್ರ ವಿದ್ಯಾಸಾಗರರು ಅತಿ ಶ್ರೇಷ್ಠ ಗುಣಗಳನ್ನು ಈ ಭುವಿಯಲ್ಲಿ ಬಿಟ್ಟು ಹೋಗಿದ್ದಾರೆ. ಅವರು ಈ ಲೋಕವನ್ನು ಜುಲೈ 29, 1891 ರಲ್ಲಿ ಅಗಲಿದರು. ಈ ಮಹಾನ್ ಚೇತನಕ್ಕೆ ನಮ್ಮ ನಮನ.

**– ಶ್ರೀ ಕೃಷ್ಣಹಂಪನ**
ದ್ವಿತೀಯ ಬಿ.ಎ. ವಿದ್ಯಾರ್ಥಿ



## ದೇಶಕ್ಕಾಗಿ ನಿನ್ನ ಸಾವು ನನಗೆ ಹೆಮ್ಮೆ ತಂದಿದೆ...!
## ಭಗತ್‌ಸಿಂಗ್ – ಪಂಜಾಬಿನ ಮರಿಸಿಂಹ

**"ಕ್ರಾಂತಿ" ಎಂದರೆ ರಕ್ತಪಾತವಲ್ಲ, ಬಾಂಬ್ ಪಿಸ್ತೂಲು ನಮ್ಮ ಸಂಸ್ಕೃತಿಯಲ್ಲ**
**ನನ್ನ ಪ್ರಕಾರ ಕ್ರಾಂತಿಯೆಂದರೆ ಅನ್ಯಾಯದ ವ್ಯವಸ್ಥೆ ತೊಲಗುವುದು – ಭಗತ್‌ಸಿಂಗ್**



ಗೋಧಿ ಗದ್ದೆಯಲ್ಲಿ ಗನ್ ಬೆಳೆ ಬೆಳೆದು ಬ್ರಿಟಿಷರ ಕೊಂದು ಭಾರತಾಂಬೆಯ ಹಣೆಗೆ ರಕ್ತ ತಿಲಕವಿಡುತ್ತೇನೆಂದ ಬಾಲಕನ ಹೆಸರೇ ವೀರ ಭಗತ್‌ಸಿಂಗ್.

**ಬಾಲ್ಯ ಮತ್ತು ಶಿಕ್ಷಣ:** ಭಗತ್‌ಸಿಂಗ್ ಮೂಲತಃ ಪಂಜಾಬಿನ ಜಲಂಧರ್ ಜಿಲ್ಲೆಯ ಖಾತ್ಕರ್ ಕಲಾನ್ ಹಳ್ಳಿಗೆ ಸೇರಿದವರು. ಆದರೆ ಇವರ ಪೂರ್ವಜರು ಈಗಿನ ಪಾಕಿಸ್ತಾನದ ಲಾಯಲ್‌ಪುರ ಜಿಲ್ಲೆಯ ಜರಾನ್ ವಾಲಾ ತಾಲೂಕಿನ ಬಂಗಾದವರು. ತಾಯಿ ವಿದ್ಯಾವತಿ, ತಂದೆ ಕಿಶನ್‌ಸಿಂಗ್, ಚಿಕ್ಕಪ್ಪರಾದ ಸ್ವರ್ಣಸಿಂಗ್ ಮತ್ತು ಅರ್ಜುನ್‌ಸಿಂಗ್ ಎಲ್ಲರೂ ಬ್ರಿಟಿಷ್ ಸರ್ಕಾರದ ವಿರುದ್ಧ ನಿರಂತರವಾಗಿ ಕಟು ಹೋರಾಟ ನಡೆಸಿಕೊಂಡು ಬಂದಿದ್ದಂತಹವರು. ಇಂತಹ ದೇಶಭಕ್ತ ಕುಟುಂಬದ ಮಗ ಭಗತ್‌ಸಿಂಗ್.

ಪ್ರಾಥಮಿಕ ಶಿಕ್ಷಣವನ್ನು ತನ್ನೂರಿನಲ್ಲಿ ಮುಗಿಸಿ, 1916ರಲ್ಲಿ ಲಾಹೋರಿನ ಡಿ.ಎ.ವಿ ಶಾಲೆಯಲ್ಲಿ 9ನೆಯ ತರಗತಿಯವರೆಗೆ ಶಿಕ್ಷಣ ಪಡೆದರು. ಲಾಹೋರಿನ ನ್ಯಾಷನಲ್ ಕಾಲೇಜು ಸೇರಿದ ಮೇಲೆ ವಿದ್ಯಾರ್ಥಿಯರಾಗಿದ್ದ ಭಗತ್ ಕ್ರಾಂತಿಕಾರಿಯಾಗಿ ರೂಪಾಂತರಗೊಂಡರು. ಕಾಲೇಜಿನ ಶೈಕ್ಷಣಿಕ ವಾತಾವರಣ ಮತ್ತು ಅಲ್ಲಿನ ಅಧ್ಯಾಪಕರು ಕಾರಣರಾಗಿದ್ದರು. ಇತಿಹಾಸ ಅಧ್ಯಾಪಕರಾದ ಜಯಚಂದ್ರ ವಿದ್ಯಾಲಂಕಾರ್‌ರವರ ಮೆಚ್ಚಿನ ಶಿಷ್ಯನಾಗಿ ತರಗತಿಯಿಂದಾಚೆಗೆ ಬಂದ ಮೇಲೆ ಸಮಾಜವಾದ, ಜಗತ್ತಿನ ಕ್ರಾಂತಿಗಳು, ರಾಷ್ಟ್ರೀಯತೆ ಶೋಷಣೆಗಳ ಬಗ್ಗೆ ಸಾಕಷ್ಟು ಚರ್ಚಿಸುತ್ತಿದ್ದರು. ಇದು ಭಗತ್‌ನ ಕ್ರಾಂತಿ ಹಸಿವಿಗೆ ಕಾರಣವಾಯಿತು.

**ವಿದ್ಯಾರ್ಥಿ ಜೀವನದಲ್ಲಿ ಐತಿಹಾಸಿಕ ನಾಟಕಗಳ ಅಭಿನಯ ಚಕ್ರವರ್ತಿಯಾಗಿದ್ದ. 1921ರಲ್ಲಿಯೇ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿದ್ದ. 1924ರಲ್ಲಿ ಬಿ.ಎ.ಗೆ ಸೇರಿದ್ದ ಭಗತ್‌ಗೆ ಮನೆಯವರೆಲ್ಲಾ ಸೇರಿ ಮದುವೆ ಮಾಡಬೇಕೆಂದು ನಿರ್ಣಯಿಸಿದಾಗ ನನ್ನನ್ನು ಸಂಪೂರ್ಣವಾಗಿ ದೇಶಕ್ಕೆ ಅರ್ಪಿಸಿಕೊಂಡಿದ್ದೇನೆ ನಾನು ಮದುವೆ ಆಗುವುದಿಲ್ಲವೆಂದು ತಂದೆಗೆ ಪತ್ರ ಬರೆದು ಸಂಪೂರ್ಣವಾಗಿ ಶಿಕ್ಷಣ ತೊರೆದು ಕಾನ್ಪುರಕ್ಕೆ ತೆರಳಿ ಅಲ್ಲಿ ಕ್ರಾಂತಿಕಾರಿ ಗಣೇಶ್ ವಿದ್ಯಾರ್ಥಿ ಜೊತೆಗೂಡಿದ.**

**ಕ್ರಾಂತಿ ದೀವಿಗೆಯ ಕೈಹಿಡಿದ ಭಗತ್‌ಸಿಂಗ್:** ವಿದ್ಯಾರ್ಥಿ ಜೀವನದಲ್ಲಿ ಐತಿಹಾಸಿಕ ನಾಟಕಗಳ ಅಭಿನಯ ಚಕ್ರವರ್ತಿಯಾಗಿದ್ದ. 1921 ರಲ್ಲಿಯೇ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿದ್ದ. 1924ರಲ್ಲಿ ಬಿ.ಎ.ಗೆ ಸೇರಿದ್ದ ಭಗತ್‌ಗೆ ಮನೆಯವರೆಲ್ಲಾ ಸೇರಿ ಮದುವೆ ಮಾಡಬೇಕೆಂದು ನಿರ್ಣಯಿಸಿದಾಗ ನನ್ನನ್ನು ಸಂಪೂರ್ಣವಾಗಿ ದೇಶಕ್ಕೆ ಅರ್ಪಿಸಿಕೊಂಡಿದ್ದೇನೆ ನಾನು ಮದುವೆ ಆಗುವುದಿಲ್ಲವೆಂದು ತಂದೆಗೆ ಪತ್ರ ಬರೆದು ಸಂಪೂರ್ಣವಾಗಿ ಶಿಕ್ಷಣ ತೊರೆದು ಕಾನ್ಪುರಕ್ಕೆ ತೆರಳಿ ಅಲ್ಲಿ ಕ್ರಾಂತಿಕಾರಿ ಗಣೇಶ್ ವಿದ್ಯಾರ್ಥಿ ಜೊತೆಗೂಡಿದ. ಇವರ ಮೂಲಕ ಚಂದ್ರಶೇಖರ ಆಜಾದ್, ಬಟುಕೇಶ್ವರದತ್, ಜೆ.ಸಿ. ಚಟರ್ಜಿ ಮುಂತಾದವರ ಪರಿಚಯುವಾಯಿತು. ಕರ್ತಾರ್‌ಸಿಂಗ್ ಮತ್ತು ಲಾಲಾ ಲಜಪತರಾಯರಿಂದ ಹೆಚ್ಚು ಪ್ರಭಾವಿತನಾಗಿದ್ದ. 1919 ಏಪ್ರಿಲ್ 13 ರಂದು ನಡೆದಿದ್ದ ಜಲಿಯನ್‌ವಾಲಾಬಾಗ್ 'ಹತ್ಯಾಕಾಂಡದ ಘಟನೆ' ಅವರನ್ನು ಹೆಚ್ಚು ವಿಚಲಿತವಾಗಿಸಿತ್ತು.

**ನವ ಜವಾನ್ ಸಭಾ ಸ್ಥಾಪನೆ:** 1917ರ ರಷ್ಯಾ ಕ್ರಾಂತಿ ಪ್ರೇರೇಪಣೆಯಿಂದ ಮಾರ್ಚ್, 1926ರಲ್ಲಿ ನವ ಜವಾನ್ ಭಾರತ್ ಸಭಾಯೆಂಬ ಕ್ರಾಂತಿಕಾರಿ ಸಂಘಟನೆ 'ರಾಮ್‌ಕಿಶನ್' ಅಧ್ಯಕ್ಷತೆಯಲ್ಲಿ ಸ್ಥಾಪನೆಯಾಯಿತು. ಈ ಸಂಘಟನೆಯಲ್ಲಿ ಭಗತ್ ಕಾರ್ಯದರ್ಶಿಯಾಗಿದ್ದರು. ಈ ಸಂಘಟನೆಯ ಮುಖ್ಯ ಸಂವಿಧಾನ ಯುವಕರಿಗೆ, ಶ್ರಮಿಕರಿಗೆ, ಜನತೆಗೆ ರಾಜಕೀಯ ಶಿಕ್ಷಣ ನೀಡಿ ಸ್ವತಂತ್ರ ಗಣತಂತ್ರ ಸ್ಥಾಪಿಸುವುದಾಗಿತ್ತು. ಈ ಸಂಘಟನೆ ಮುಂದೆ 'ಹಿಂದೂಸ್ತಾನ್ ಸಮಾಜವಾದಿ ಸಂಘಟನೆ' ಎಂದಾಯಿತು.

**ಲಾಲ ಲಜಪತರಾಯ್ ಸಾವಿಗೆ ಪ್ರತಿಕಾರ:** 1928 ಲಾಹೋರ್‌ನಲ್ಲಿ ನಡೆದ ಸೈಮನ್ ಗೋಬ್ಯಾಕ್ ಚಳು ವಳಿಯಲ್ಲಿ ಬ್ರಿಟಿಷ್ ಪೊಲೀಸರು ಲಾಠಿಚಾರ್ಜ್ ಮಾಡಿ ಲಜಪತರಾಯರ ಸಾವಿಗೆ ಕಾರಣರಾದರು. ಈ ಸಾವಿಗೆ ಕಾರಣನಾದ ಪೊಲೀಸ್ ಸೂಪರಿಂಟೆಂಟ್ ಸ್ಕಾಟ್‌ನನ್ನು ಕೊಲ್ಲಲು ನಿರ್ಧರಿಸಿ 17 ಡಿಸೆಂಬರ್ 1928ರಂದು ರಾಜ್‌ಗುರು ಮತ್ತು ಭಗತ್‌ಸಿಂಗ್ ಸ್ಕಾಟ್ ಕಡೆ ಗುಂಡು ಹಾರಿಸುವುದರ, ಬದಲು ಸ್ಯಾಂಡರ್ಸ್‌ಗೆ ಗುಂಡು ತಗುಲಿ ಗಾಯಗೊಂಡನು.

8 ಏಪ್ರಿಲ್ 1929ರಂದು ಇನ್‌ಕ್ವಿಲಾಬ್ ಜಿಂದಾಬಾದ್ ಸಾಮ್ರಾಜ್ಯಶಾಹಿ ಮುರ್ದಬಾದ್ ಎಂದು ಘೋಷಣೆ ಕೂಗುತ್ತಾ ದೆಹಲಿಯ ಅಸೆಂಬ್ಲಿಯ ಸೆಂಟ್ರಲ್ ಹಾಲ್ ಅಧಿವೇಶನದಲ್ಲಿ ರಾಜ್‌ಗುರು, ಸುಖ್‌ದೇವ್ ಬಾಂಬ್ ದಾಳಿ ನಡೆಸಿದರು. ಈ ಸಮಯದಲ್ಲಿ ಭಗತ್‌ಸಿಂಗ್ ತಪ್ಪಿಸಿಕೊಳ್ಳದೆ ಬಂಧನಕ್ಕೊಳಗಾದಾಗ ಭಗತ್‌ಸಿಂಗ್ ಹೇಳಿದ್ದು ಯಾರನ್ನಾದರು ಕೊಲ್ಲುವುದು ನಮ್ಮ ಆಶಯವಲ್ಲ ನಾವು, ಬಾಂಬ್ 'ಸ್ಫೋಟಿಸಿದ್ದು ಬ್ರಿಟಿಷ್ ಸರ್ಕಾರಕ್ಕೆ.

**ಪು.ತಿ.ನೋ.**



**ಭಗತ್ ಸಾವಿನ ಅನುಮಾನದ ಹುತ್ತ:** 7 ಅಕ್ಟೋಬರ್ 1930ರಂದು ಶಾಸನ ಸಭೆಯಲ್ಲಿ ಬಾಂಬ್ ಸಿಡಿಸಿದ್ದಕ್ಕೆ ಭಗತ್‌ಸಿಂಗ್, ರಾಜ್‌ಗುರು ಮತ್ತು ಸುಖದೇವ್‌ಗೆ ನೇಣುಶಿಕ್ಷೆ ನೀಡಲಾಯಿತು. ಅದರಂತೆ 24 ಮಾರ್ಚ್ 1931 ರಂದು ನೇಣಿಗೇರಿಸಲು ನಿರ್ಧರಿಸಿದ್ದರು ಸಹ 'Operation Trojan Horse' ಹೆಸರಿನಲ್ಲಿ ಯೋಜನೆ ರೂಪಿಸಿ **23 ಮಾರ್ಚ್ 1931 ಸಂಜೆ 7.30ಕ್ಕೆ ಗಲ್ಲಿಗೇರಿಸಿ ಅರೆ ಜೀವಗೊಳಿಸಿ ಜೈಲು ಅಧಿಕಾರಿಗಳೇ ರಾವಿ ಸಟ್ಲೇಜ್ ನದಿ ದಂಡೆ ಮೇಲೆ ರಹಸ್ಯವಾಗಿ ಸುಟ್ಟುಹಾಕಿದರು.** ದಿಲೀಪ್‌ಸಿಂಗ್ ಮತ್ತು ಕುಲದೀಪ್‌ಸಿಂಗ್ ಬರೆದಿರುವ 'Some Hidden Facts: Martyrdom of Shaheed Bhagat Singh' ಪುಸ್ತಕದಲ್ಲಿ ಕ್ರಾಂತಿ ಕಿಡಿ ಭಗತ್ ಮತ್ತು ಸ್ನೇಹಿತರ ಸಾವಿನ ಸುತ್ತ ಅನುಮಾನದ ಹುತ್ತ ಬೆಳೆದಿದೆ. ಗಲ್ಲಿಗೇರಿಸಿಲ್ಲ ಗುಂಡಿಕ್ಕಿ ಕೊಂದು ಶವಗಳನ್ನು ಅರೆಬರೆ ಸುಟ್ಟು ಎಸೆದಿದ್ದನ್ನು ಆತನ ಸಹೋದರಿ ಶವ ಸಂಸ್ಕಾರ ಮಾಡಿದರೆಂದು ಸಹ ಹೇಳಲಾಗುತಿದೆ.

**ಭಗತ್‌ಸಿಂಗ್ ಮತ್ತು ಗಾಂಧೀಜಿ:** ಕ್ರಾಂತಿಕಾರಿ ಕರ್ತಾರ್‌ಸಿಂಹರನ್ನು ಕೊಂದಾಗ ಮೌನವಹಿಸಿ, ಚೌರಿ–ಚೌರ ಘಟನೆಯ ನಂತರ ಗಾಂಧಿ ತಮ ಅಸಹಕಾರ ಚಳುವಳಿಯನ್ನು ಅರ್ಧಕ್ಕೆ ನಿಲ್ಲಿಸಿದ್ದರಿಂದ ಭಗತ್‌ಸಿಂಗ್ ಅಸಮಾಧಾನಗೊಂಡಿದ್ದ. ಭಗತ್‌ಸಿಂಗ್ ನೇಣುಶಿಕ್ಷೆಯ ರದ್ದತಿಗಾಗಿ ದೇಶದಾದ್ಯಂತ ಸಹಿ ಸಂಗ್ರಹ ಮಾಡಿ ಗಾಂಧಿಯಲ್ಲಿ ಮನವಿ ಮಾಡಿಕೊಂಡರು. ಆದರೆ ಇರ್ವಿನ್ ಒಪ್ಪಂದಕ್ಕೆ 5 ಮಾರ್ಚ್ 1931 ರಂದು ಗಾಂಧಿ ಸಹಿ ಹಾಕುವಾಗ ಭಗತ್‌ಸಿಂಗ್ ಶಿಕ್ಷೆ ವಿಚಾರದಲ್ಲಿ ಮೌನವಹಿಸಿದ್ದು ದೇಶವಾಸಿಗಳು ಇಂದಿಗೂ ಮರೆತಿಲ್ಲ.

**ಭಗತ್‌ಸಿಂಗ್ ಸಿದ್ಧಾಂತ:** ಭಗತ್‌ಸಿಂಗ್ ಕೇವಲ ಆಕ್ರೋಶ ಭರಿತ ಯುವ ಹೋರಾಟಗಾರನಲ್ಲ, ಅವನೊಬ್ಬ ಸೈದ್ಧಾಂತಿಕ ನಿಲುವು ಮತ್ತು ಬದ್ಧತೆಯ ಕ್ರಾಂತಿಕಾರಿಯಾಗಿದ್ದ ಕಾರ್ಲ್ ಮಾರ್ಕ್ಸ್ ಸಮತಾವಾದಿ ತತ್ವಗಳಲ್ಲಿ ನಂಬಿಕೆ ಇತ್ತಾದರು ರಕ್ತಪಾತ ಭಗತ್‌ಸಿಂಗ್ ಗುರಿಯಾಗಿರಲಿಲ್ಲ. ರೈತ, ಕಾರ್ಮಿಕ, ಶೋಷಿತರ ದನಿಯಾಗ ಬಯಸಿದ್ದ ಸಮಾನತೆ ಸಮಾಜವಾದಿ ಗಣರಾಜ್ಯದ ಆಶಯ ಅವನದಾಗಿತ್ತು. ಗಾಂಧಿ ವಿಚಾರಗಳಲ್ಲಿ ಅಸಹನೆಯಿತ್ತು ಸಾವಿನ ಕೊನೆ ಘಳಿಗೆಯಲ್ಲೂ ಲೆನಿನ್ ಬಗೆಗಿನ ಪುಸ್ತಕ ಓದುತ್ತಿದ್ದ.

**ಭಗತ್‌ಸಿಂಗ್ ತಾಯಿ ಭಾರತಮಾತಾ:** ಭಗತ್ ಸಿಂಗ್ ತಾಯಿ ವಿದ್ಯಾವತಿ ಭಗತ್‌ಸಿಂಗ್ ನೇಣುಗೇರುವ ಸಂದರ್ಭದಲ್ಲಿ ಮಗನೆ ಭಗತ್ **"ನೀನು ಸಾವಿಗೆ ಹೆದರುವವನಲ್ಲ, ಯಾರ ಸಾವನ್ನು ಜಗತ್ತು ಸದಾ ಕಾಲ ನೆನಪಿಡುತ್ತದೆಯೋ ಅದು ಶ್ರೇಷ್ಟ ಸಾವು. ದೇಶಕ್ಕಾಗಿ ನಿನ್ನ ಸಾವು ನನಗೆ ಹೆಮ್ಮೆ ತಂದಿದೆ'** ಎಂದು ವೀರ ಮಗನಿಗೆ ತಿಳಿಸುತ್ತಾರೆ.

ತಾಯಿ ವಿದ್ಯಾವತಿಗೆ ಸ್ವತಂತ್ರ ನಂತರ ಭಾರತದ ಪಂಜಾಬ್ ಸರ್ಕಾರ ಭಾರತಮಾತಾ ಎಂಬ ಬಿರುದನ್ನು 1973ರಲ್ಲಿ ನೀಡಿತ್ತು. 1975 ಜೂನ್ 2ರಲ್ಲಿ ಇವರು ನಿಧನರಾದರು. ಭಾರತಾಂಬೆಯ ಅಮೃತ ಪುತ್ರ ಭಗತ್‌ಸಿಂಗ್‌ನ್ನು ಕೆಲವು ರಾಜಕಾರಣಿಗಳು ಅಪಹರಿಸಿದ್ದಾರೆ. ಕೆಲವರು ಕೇಸರಿ ಶಾಲು ಹೊದಿಸಿ ಕೆಲವರು ಕೆಂಪು ಶಾಲು ಹೊದಿಸಿ ಅವನ ವ್ಯಕ್ತಿತ್ವವನ್ನು ವಿರೂಪಗೊಳಿಸಿ ವಿಕೃತಾನಂದದ ಕೇಕೆ ಹಾಕುತ್ತಿದ್ದಾರೆ. ನಮ್ಮ ಯುವಕರಿಗೆ ನಿಜ ಭಗತ್‌ಸಿಂಗ್‌ನನ್ನು ಪರಿಚಯಿಸುವಲ್ಲಿ ಶಿಕ್ಷಣವು ಸಹ ಸೋತಿರುವುದು ವಿಪರ್ಯಾಸ. ಏಕೆಂದರೆ ಇತಿಹಾಸ ಪಠ್ಯ ರಚನೆಯಲ್ಲಿ ರಾಜಕೀಯ ಪಕ್ಷಗಳ ಕಾಟದಿಂದ ಹೊರ ಬರಲಾಗುತ್ತಿಲ್ಲ. ಭಗ್ನಗೊಂಡಿರುವ ಭಗತ್‌ಸಿಂಗ್ ಮೂರ್ತಿಯನ್ನು ವಿಸರ್ಜಿಸಿ ನಿಜ ಕ್ರಾಂತಿವೀರನನ್ನು ಪರಿಚಯಿಸುವ ಕೆಲಸ ಶಿಕ್ಷಕ ಮತ್ತು ಶಿಕ್ಷಣದ್ದಾಗಬೇಕಿದೆ.

**– ಕು. ರಕ್ಷಿತ ಜಿ**
ಅಂತಿಮ ಬಿ.ಎ. ವಿದ್ಯಾರ್ಥಿನಿ

## 414ನೇ ವಿಶ್ವವಿಖ್ಯಾತ ದಸರಾ ಹಬ್ಬದ ಹಾರ್ದಿಕ ಶುಭಾಶಯಗಳು





## BoS Meeting - 2023-24 (NEP - V & VI Semester)





## 'Evaluation Work' - Even Semester - 2022-23





**Inauguration Programme of 'Historical Exhibition' at Teresian College, Mysuru on 23.09.2023**












# Ithihasika Mela at Teresian PU College



Mysuru, Sept. 26- Teresian PU College, Siddarthanagar, had organised Ithihasika Mela (History exhibition) on Sept. 23 in the College auditorium.

This programme was inaugurated by H. Shreedhara, Head, Department of History, SBRR Mahajana First Grade College.

On the occasion, students presented patriotic dance and songs. Steven Fernandes, HoD of History, Sadhana, Dean of Arts, Ursala George, Dean of Commerce, Rabiya Tazeen, Dean of Science were present.



## Special Lecture & Interaction Session on 'History in Competitive Exams' at D. Devaraja Urs First Grade College, Hunasuru - 26.7.2023








**Visited to Indira Gandhi National Museum and Natural History Museum, Mysuru by I Year Students on 30.8.2023**







Interaction Session on **'Conservation and Challenges of Heritage Buildings'**
Resource Person: **Dr. N.S. Rangaraju,** Rtd. Professor,
DoS in Ancient History and Archaeology, University of Mysore, Mysuru - 12.10.2023




# ಪಾರಂಪರಿಕ ಕಟ್ಟಡ ಸಂರಕ್ಷಣೆ ಸವಾಲಿನ ಕೆಲಸ: ರಂಗರಾಜು




**ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಧ್ಯಾಪಕ ಡಾ.ಎನ್.ಎಸ್. ರಂಗರಾಜು ಮಾತನಾಡಿದರು.**

ಮೈಸೂರು: ಪ್ರಸ್ತುತ ದಿನಗಳಲ್ಲಿ ಪಾರಂಪರಿಕ ಕಟ್ಟಡಗಳನ್ನು ಪುನರುಜ್ಜೀವನಗೊಳಿಸಿ, ಸಾರ್ವಜನಿಕವಾಗಿ ಅವುಗಳನ್ನು ಸಂರಕ್ಷಿಸಿಕೊಂಡು ಹೋಗುವುದು ಒಂದು ಸವಾಲಿನ ಕೆಲಸವಾಗಿದೆ ಎಂದು ಮೈಸೂರು ವಿವಿಯ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ.ಎನ್.ಎಸ್.ರಂಗರಾಜು ಹೇಳಿದರು.

ನಗರದ ಜಯಲಕ್ಷ್ಮಿಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಇತಿಹಾಸ ವಿಭಾಗದಿಂದ ಆಯೋಜಿಸಿದ್ದ 'ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಮತ್ತು ಸವಾಲುಗಳು' ವಿಷಯ ಕುರಿತ ವಿಶೇಷ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾಮಾನ್ಯವಾಗಿ 100 ವರ್ಷಗಳು ದಾಟಿದ ಯಾವುದೇ ಐತಿಹಾಸಿಕ ಕಟ್ಟಡಗಳನ್ನು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಅನುಮೋದನೆಯ ಮೇರೆಗೆ ಅಧಿಕೃತವಾಗಿ ಪಾರಂಪರಿಕ ಕಟ್ಟಡವೆಂದು ಪರಿಗಣಿಸಲಾಗುತ್ತದೆ. ಇದುವರೆಗೂ ಕೇಂದ್ರ ಸರ್ಕಾರದಿಂದ 775 ಸ್ಮಾರಕಗಳು ಹಾಗೂ ರಾಜ್ಯ ಸರ್ಕಾರದಿಂದ 864 ಕಟ್ಟಡಗಳನ್ನು ಪಾರಂಪರಿಕ ಕಟ್ಟಡಗಳೆಂದು ಘೋಷಿಸಲಾಗಿದೆ. ಆದರೆ ಇನ್ನೂ 35,000 ಕಟ್ಟಡಗಳು ಮತ್ತು ಸ್ಮಾರಕಗಳನ್ನು ಪಾರಂಪರಿಕ ಕಟ್ಟಡಗಳೆಂದು ಪರಿಗಣಿಸಲಾಗಿಲ್ಲ ಎಂದು ವಿವರಿಸಿದರು.

ಮೈಸೂರು ನಗರದಲ್ಲಿ ಒಟ್ಟು 234 ಪಾರಂಪರಿಕ ಕಟ್ಟಡಗಳಿದ್ದು, ಇವುಗಳಲ್ಲಿ ಅಂಬಾವಿಲಾಸ ಅರಮನೆ ಸೇರಿದಂತೆ 14 ಅರಮನೆಗಳು, 25 ಮ್ಯೂಸಿಯಂ ಕಟ್ಟಡಗಳನ್ನು ಕಾಣಬಹುದು. ಇವುಗಳಲ್ಲಿ ಕೆಲವು ಕಟ್ಟಡಗಳು ಇಂದಿಗೂ ಆಡಳಿತಾತ್ಮಕ ಕಚೇರಿಗಳಾಗಿ ಬಳಕೆಯಾಗುತ್ತಿವೆ. ಮೈಸೂರಿನ ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ಪಾರಂಪರಿಕ ಕಟ್ಟಡಗಳ ಪಾತ್ರ ನಿರ್ಣಾಯಕ. ಹೀಗಾಗಿ ಪಾರಂಪರಿಕ, ಐತಿಹಾಸಿಕ ಕಟ್ಟಡಗಳು ಮತ್ತು ಸ್ಮಾರಕಗಳು ನಮ್ಮ ನಾಡಿನ ಪರಂಪರೆ ಮತ್ತು ಸಂಸ್ಕೃತಿಯ ಸಂಕೇತವಾಗಿದ್ದು, ಶ್ರೀಮಂತ ಪಾರಂಪರಿಕ ಕಟ್ಟಡಗಳನ್ನು ಉಳಿಸಿಕೊಂಡು ಹೋಗುವುದು ಪ್ರತಿಯೊಬ್ಬ ನಾಗರಿಕರ ಜವಾಬ್ದಾರಿಯಾಗಿದೆ ಎಂದರು.

ಪ್ರಾಂಶುಪಾಲರಾದ ಡಾ.ಬಿ. ಆರ್. ಜಯಕುಮಾರಿ, ಇತಿಹಾಸ ವಿಭಾಗದ ಮುಖ್ಯಸ್ಥಡಾ.ಎಚ್.ಶ್ರೀಧರ್, ಅಧ್ಯಾಪಕರಾದ ಎ.ಆರ್.ನಂದೀಶ, ಎನ್.ಜಯಲಕ್ಷ್ಮೀ ಇತರರು ಹಾಜರಿದ್ದರು.






ಶಿಕ್ಷಣದಿಂದ ಶ್ರೇಷ್ಠತೆ

**ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು (ಸ್ವಾಯತ್ತ)**

ಜಯಲಕ್ಷ್ಮೀಪುರಂ, ಮೈಸೂರು–12

ಶ್ರೇಷ್ಠತೆಯ ಸಾಮರ್ಥ್ಯವುಳ್ಳ ಕಾಲೇಜು

**ಇತಿಹಾಸ ವಿಭಾಗ**

**Dept. of History**

**ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೊಂಡು, ನ್ಯಾಕ್‌ನಿಂದ 'ಎ' ಮಾನ್ಯತೆ ಪಡೆದಿದೆ.**




ಸಂಚಿಕೆ: 40 ಡಿಸೆಂಬರ್ 2023 ಪ್ರಧಾನ ಸಂಪಾದಕರು: ಡಾ. ಬಿ.ಆರ್. ಜಯಕುಮಾರಿ, ಪ್ರಾಂಶುಪಾಲರು www.mahajana.edu.in ಸಂಪಾದಕರು: ಡಾ. ಶ್ರೀಧರ ಹೆಚ್, ಇತಿಹಾಸ ವಿಭಾಗ ಪುಟಗಳು: 08

## ಸಂಪಾದಕೀಯ

## ಮೈಸೂರು ಲಾಂಛನ

### ಗಂಡಭೇರುಂಡದ ರಹಸ್ಯ !



ನಮ್ಮ ಕರ್ನಾಟಕದ ಲಾಂಛನ ಗಂಡಭೇರುಂಡವೆನ್ನುವುದು ಎಲ್ಲರಿಗೂ ತಿಳಿದಿರುವ ವಿಚಾರವೇ ಆಗಿದೆ. ಆದರೆ ಆ ಪಕ್ಷಿಯ ಇತಿಹಾಸದ ಬಗ್ಗೆ ಬಹುತೇಕರಿಗೆ ಅರಿವೇ ಇರಲಾರದು. ಈ ಬಗ್ಗೆ ಒಂದಿಷ್ಟು ಮಾಹಿತಿ ಇಲ್ಲಿದೆ.

ಕರ್ನಾಟಕ ಸರ್ಕಾರದ ಲಾಂಛನವಾದ ಎರಡು ತಲೆಯ ಹದ್ದಿನ ರೂಪದ ಗಂಡಭೇರುಂಡ ಪಕ್ಷಿ ನೋಡಲು ಬಲಿಷ್ಠವಾಗಿ, ವಿಚಿತ್ರವಾಗಿ ಕಾಣುತ್ತದೆ. ಕೆಲವರು ಈ ಪಕ್ಷಿಯನ್ನು ವಿಷ್ಣುವಿನ ಮತ್ತೊಂದು ರೂಪ ಎನ್ನುತ್ತಾರೆ. ಅಸುರ ರಾಜ ಹಿರಣ್ಯ ಕಶ್ಯಪನನ್ನು ಕೊಂದ ನಂತರ ನರಸಿಂಹ ಅವತಾರಿ ಶ್ರೀ ವಿಷ್ಣುವಿನ ಕೋಪ ಕಡಿಮೆ ಆಗಲಿಲ್ಲ. ಆಗ ಆತನ ಕೋಪವನ್ನು ಶಮನಗೊಳಿಸಲು ಶಿವ ಶರಭೇಶ್ವರನ ರೂಪ ತಾಳಿ ಬಂದನಂತೆ. ಈ ಸಮಯದಲ್ಲಿ ಶರಭ ರೂಪಿ ಶಿವನನ್ನು ಎದುರಿಸಲು ವಿಷ್ಣು ಗಂಡಭೇರುಂಡ ರೂಪ ತಾಳಿದ ಎಂದು ಮಾರ್ಕಂಡೇಯ ಪುರಾಣದಲ್ಲಿ ಉಲ್ಲೇಖವಿದೆ.

ಈ ಪಕ್ಷಿ ಎರಡು ತಲೆಗಳನ್ನು ಹೊಂದಿದೆ. ಕೆಳದಿಯ ಪ್ರಾಚೀನ ರಾಮೇಶ್ವರ ದೇವಾಲಯದ ಛಾವಣಿಯಲ್ಲಿ ಈ ಪಕ್ಷಿಯ ಶಿಲ್ಪವಿದೆ. ಬೇಲೂರಿನ ಚೆನ್ನಕೇಶವ ದೇವಾಲಯದಿಂದ ಹಿಡಿದು ದೇಶದ ಹಲವು ಪ್ರಾಚೀನ ಮಂದಿರಗಳಲ್ಲಿ ಈ ಪಕ್ಷಿಯ ಶಿಲ್ಪ ಅಲಂಕಾರಿಕ ಭಾಗವಾಗಿ ಬಳಸಲಾಇದೆ. ಈ ಪಕ್ಷಿಗೆ ಮೊದಲ ಬಾರಿಗೆ ಮಾನವ ರೂಪ ನೀಡಿದ್ದು ಚಾಲುಕ್ಯರು. ಅವರ ಕಾಲದಲ್ಲಿ ಬಳ್ಳಿಗಾವೆಯ ಕೇದಾರೇಶ್ವರ ದೇವಾಲಯದಲ್ಲಿ ಕ್ರಿ.ಶ. 1047 ರ ಸುಮಾರಿಗೆ ಬೃಹತ್ ಮಾನವ ಆಕೃತಿಯ ಗಂಡಭೇರುಂಡವನ್ನು ಕೆತ್ತಲಾಯಿತು. ಇಲ್ಲಿನವರು ಇದನ್ನು ಗಂಡಭೇರುಂಡೇಶ್ವರ ಎಂದು ಕರೆಯುತ್ತಾರೆ. ಇವರ ನಂತರ ಹೊಯ್ಸಳರು ಕೂಡ ಗಂಡಭೇರುಂಡವನ್ನು ತಮ್ಮ ಶಿಲ್ಪಕಲೆಯಲ್ಲಿ ಬಳಸಿದ್ದಾರೆ.

ವಿಜಯನಗರ ಹಾಗೂ ಮೈಸೂರು ಒಡೆಯರು ಈ ಪಕ್ಷಿಯನ್ನು ತಮ್ಮ ನಾಣ್ಯಗಳಲ್ಲಿ ಮುದ್ರಿಸಲು ಪ್ರಾರಂಭಿಸಿದರು. ವಿಜಯನಗರದ ಅರಸ ಅಚ್ಯುತರಾಯ 1529–1542 ರವರೆಗೆ ವಿಜಯನಗರದ ಶಕ್ತಿ, ಸಾಮರ್ಥ್ಯದ ಸಂಕೇತವಾಗಿ ಗಂಡಭೇರುಂಡ ಚಿಹ್ನೆಯನ್ನು ಹೊಂದಿದ ಚಿನ್ನದ ನಾಣ್ಯಗಳನ್ನು ಮುದ್ರಿಸುತ್ತಾನೆ. ಮೈಸೂರು ಒಡೆಯರು ಗಂಡಭೇರುಂಡವನ್ನು ತಮ್ಮ ಲಾಂಛನದಲ್ಲಿ ಬಳಸುವ ಪರಂಪರೆ ಪ್ರಾರಂಭವಾಯಿತು. ಮೈಸೂರು ಅರಸನಾಗಿದ್ದ ಯದುರಾಯನು ಮೊದಲ ಬಾರಿಗೆ ಗಂಡಭೇರುಂಡವಿದ್ದ ಧ್ವಜವನ್ನು ತಮ್ಮ ವಿಜಯಯಾತ್ರೆಯಲ್ಲಿ ಬಳಸಿದರು. 1947 ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ 1956ರವರೆಗೆ ಗಂಡಭೇರುಂಡ ಮೈಸೂರು ರಾಜ್ಯದ ಲಾಂಛನವಾಗಿ ಬಳಕೆಯಾಯಿತು. 1971 ರಲ್ಲಿ ನಮ್ಮ ರಾಜ್ಯ ಕರ್ನಾಟಕ ಎಂದು ಹೆಸರು ಪಡೆದ ನಂತರವೂ ರಾಜ್ಯ ಲಾಂಛನದಲ್ಲಿ ಬದಲಾವಣೆಯಾಗಲಿಲ್ಲ. ಇವತ್ತಿಗೂ ನಮ್ಮ ರಾಜ್ಯದ ಘನತೆಯ ಸಂಕೇತವಾಗಿದೆ.

**– ಡಾ. ಶ್ರೀಧರ ಹೆಚ್**
ಶೈಕ್ಷಣಿಕ ಡೀನ್
ಹಾಗೂ
ಮುಖ್ಯಸ್ಥರು, ಇತಿಹಾಸ ವಿಭಾಗ



# ಪ್ರಾಚೀನ ಶಿಕ್ಷಣ ಕಾಶಿ – ನಳಂದ ವಿಶ್ವವಿದ್ಯಾಲಯ



ನಳಂದ ಪ್ರಾಚೀನ ವಿದ್ಯಾಕೇಂದ್ರ. ಇದು ಬಿಹಾರದ ರಾಜಧಾನಿ ಪಾಟ್ನಾದ ಆಗ್ನೇಯ ಭಾಗದಲ್ಲಿ ಸುಮಾರು 55 ಮೈಲು ದೂರದಲ್ಲಿದೆ. ಇದು ಇತಿಹಾಸದಲ್ಲಿ ದಾಖಲಾದ ಮೊದಲ ಅತಿ ಶ್ರೇಷ್ಠ ವಿದ್ಯಾಲಯ. ಇಲ್ಲಿಯ ಕೆಲವು ಕಟ್ಟಡಗಳನ್ನು ಮೌರ್ಯ ವಂಶದ ಚಕ್ರವರ್ತಿ ಅಶೋಕ ನಿರ್ಮಿಸಿದ್ದಾನೆ. ಗುಪ್ತ ಸಾಮ್ರಾಜ್ಯವೂ ಕೆಲವು ಮಠಗಳನ್ನು ನಿರ್ಮಿಸಲು ಪ್ರೋತ್ಸಾಹಿಸಿತ್ತು. ಇತಿಹಾಸಜ್ಞರ ಪ್ರಕಾರ, ನಳಂದವು ಗುಪ್ತ ರಾಜ ಶಕ್ರಾದಿತ್ಯ ಮತ್ತು ಬೌದ್ಧ ಸಾಮ್ರಾಟರಾದ ಹರ್ಷ ಹಾಗೂ ಪಾಲ ಸಾಮ್ರಾಜ್ಯದ ನಂತರದ ಕೆಲವು ಚಕ್ರವರ್ತಿಗಳ ಕಾಲದಲ್ಲಿ ಪ್ರವತರ್ಧಮಾನದಲ್ಲಿತ್ತು. ನಳಂದದ ಸಂಕೀರ್ಣವು ಕೆಂಪು ಇಟ್ಟಿಗೆಗಳಿಂದ ಕಟ್ಟಲ್ಪಟ್ಟಿತ್ತು ಮತ್ತು ಅದರ ಭಗ್ನಾವಶೇಷವು 14 ಎಕರೆಗಳಷ್ಟು ಸ್ಥಳವನ್ನು ಆಕ್ರಮಿಸಿದೆ.

**ಮಹತ್ವವೇಕೆ?**

ನಳಂದ ಎಂದರೆ ನೀಡಿದಷ್ಟೂ ತೃಪ್ತಿಯಿಲ್ಲ ಎಂದು ಅರ್ಥ. ಉತ್ತುಂಗ ಸ್ಥಿತಿಯಲ್ಲಿದ್ದ ಸಂದರ್ಭದಲ್ಲಿ ಈ ವಿಶ್ವವಿದ್ಯಾಲಯವು ಚೀನಾ, ಗ್ರೀಕ್, ಕೊರಿಯಾ, ಜಪಾನ್, ಟಿಬೆಟ್, ಇಂಡೊನೇಷಿಯಾ, ಟರ್ಕಿ, ಪರ್ಷಿಯಾದಂತಹ ವಿದೇಶಗಳಿಂದ ಪಂಡಿತರು ಮತ್ತು ವಿದ್ಯಾರ್ಥಿಗಳನ್ನು ಆಕರ್ಷಿಸಿತ್ತು. ಇದು ಜಗತ್ತಿನ ಮೊತ್ತ ಮೊದಲ ವಸತಿಸೌಕರ್ಯ ಹೊಂದಿದ್ದ ವಿಶ್ವವಿದ್ಯಾಲಯವಾಗಿತ್ತು. ಅಂದರೆ ವಿದ್ಯಾರ್ಥಿಗಳಿಗೆ ವಸತಿಗೃಹಗಳಿದ್ದವು. ಉತ್ತುಂಗ ಸ್ಥಿತಿಯಲ್ಲಿದ್ದಾಗ ಸುಮಾರು 10 ಸಾವಿರ ವಿದ್ಯಾರ್ಥಿಗಳನ್ನು ಮತ್ತು 2 ಸಾವಿರ ಅಧ್ಯಾಪಕರನ್ನು ಹೊಂದಿತ್ತು. ಈ ವಿಶ್ವವಿದ್ಯಾಲಯವನ್ನು ವಾಸ್ತುಶಾಸ್ತ್ರದ ಮೇರುಕೃತಿ ಎಂದು ಪರಿಗಣಿಸಲಾಗಿದೆ.

**ಪ್ರಾಚೀನ ವಿಶ್ವವಿದ್ಯಾನಿಲಯ ಪುನರಾರಂಭ**

ಕೇಂದ್ರ ಸರಕಾರ ವಿಶೇಷ ಕಾಯ್ದೆಯ ಮೂಲಕ ಈ ಪ್ರಾಚೀನ ವಿಶ್ವವಿದ್ಯಾಲಯವನ್ನು 2010 ರಲ್ಲಿ ಪುನರಾರಂಭಿಸಿದೆ. ಖಾಸಗಿ ಸಹಭಾಗಿತ್ವದಲ್ಲಿ ಈ ವಿವಿಯನ್ನು ಕಟ್ಟುವ ಕೆಲಸ ನಡೆಯುತ್ತಿದ್ದು, ಏಷ್ಯಾದ ಅನೇಕ ದೇಶಗಳು ಬೆಂಬಲ ನೀಡಿವೆ. ವಿದೇಶಿ ವಿವಿಗಳ ಜತೆ ಒಪ್ಪಂದ ಮಾಡಿಕೊಳ್ಳಲಾಗುತ್ತಿದ್ದು, 2014 ರ ಜುಲೈನಿಂದ ಇತಿಹಾಸ ಮತ್ತು ಪರಿಸರ ಅಧ್ಯಯನ ಕೋರ್ಸ್ ಆರಂಭಿಸಲಾಗುತ್ತಿದೆ. ವಿಶ್ವದ ಪುರಾತನ ವಿಶ್ವವಿದ್ಯಾಲಯಗಳಾದ ಈಜಿಪ್ಟ್‌ನ ಅಲ್–ಅಜಹರ್, ಕೇಂಬ್ರಿಜ್ ಮತ್ತು ಹಾರ್ವರ್ಡ್ ವಿಶ್ವವಿದ್ಯಾಲಯಗಳ ಸಹಭಾಗಿತ್ವದಲ್ಲಿ ನಳಂದ ವಿಶ್ವವಿದ್ಯಾಲಯವು ಕಾರ್ಯನಿರ್ವಹಿಸಲಿದೆ. ಬೌದ್ಧರು ಹೆಚ್ಚಾಗಿರುವ ಚೀನಾದ ಜತೆ ಈ ವಿಶ್ವವಿದ್ಯಾಲಯವು ಹೆಚ್ಚಿನ ಸಹಭಾಗಿತ್ವವನ್ನು ಹೊಂದಲಿದೆ.

- ನಳಂದ ಜಗತ್ತಿನ ಮೊದಲ ವಿಶ್ವವಿದ್ಯಾಲಯ ಎಂದು ಹೇಳಲಾಗುತ್ತಿದೆ.
- ನಳಂದ ವಿವಿಯ ಗ್ರಂಥಾಲಯವನ್ನು ಧರ್ಮ ಗಂಜ ಎಂದು ಕರೆಯಲಾಗುತ್ತಿದೆ. ಇದು ಆ ಕಾಲದಲ್ಲಿ ವಿಶ್ವದಲ್ಲಿಯೇ ಹೆಚ್ಚು ಚಿರಪರಿಚಿತ ಬೌದ್ಧಜ್ಞಾನದ ಅತಿ ದೊಡ್ಡ ಉಗ್ರಾಣವಾಗಿತ್ತು.
- ಗ್ರಂಥಾಲಯ ರತ್ನಸಾಗರ, ರತ್ನೋಡಧಿ ಮತ್ತು ರತ್ನರಂಜಕ ಎಂಬ ಮೂರು ಕಟ್ಟಡಗಳನ್ನು ಒಳಗೊಂಡಿದೆ.
- ನಳಂದ ವಿಶ್ವವಿದ್ಯಾಲಯದ ವಿಹಾರಗಳ ಪಾಳು ಸ್ಥಳದಲ್ಲಿ ಧನುಸ್ಸಿನ ಚಿತ್ರವಿರುವ ನೆಲಹಾಸನ್ನು ಕಾಣುತ್ತೇವೆ. ಧನುಸ್ಸು ಗುಪ್ತರ ರಾಜ ಮುದ್ರೆಯ ಚಿಹ್ನೆಯಾಗಿತ್ತು.

**– ವರ್ಷಿತ ಎಸ್**
ಅಂತಿಮ ಬಿ.ಎ. ವಿದ್ಯಾರ್ಥಿನಿ



## ಪ್ರಾಚೀನ ಭಾರತದ ಶ್ರೀಮಂತ ಕಲಾಶೈಲಿ – ಗಾಂಧಾರ ಶಿಲ್ಪಕಲೆ



ಭಾರತದ ಕಲಾ ಇತಿಹಾಸದಲ್ಲಿ ಗಾಂಧಾರ ಕಲೆಗೆ ಪ್ರಮುಖ ಸ್ಥಾನವಿದೆ. ಇಂದಿನ ಪೆಶಾವರ್ ಪಟ್ಟಣದ ಸುತ್ತಮುತ್ತಲಿನ ಪ್ರದೇಶವು ಪ್ರಾಚೀನ ಕಾಲದಲ್ಲಿ ಗಾಂಧಾರ ದೇಶವೆಂದು ಪ್ರಸಿದ್ಧಿ ಪಡೆದಿತ್ತು. ಗಾಂಧಾರ ಪ್ರದೇಶದಲ್ಲಿ ವಿದೇಶಿ ಆಳ್ವಿಕೆ ಕಾಲದಲ್ಲಿ ಬೆಳೆದು ಬಂದ ಕಲೆಗೆ ಗಾಂಧಾರ ಕಲೆ ಎಂದು ಹೆಸರು. ಗಾಂಧಾರವು ಮೌರ್ಯರ ನಂತರ ಮತ್ತು ಅದಕ್ಕೂ ಹಿಂದೆ ಹೆಚ್ಚು ಕಾಲ ವಿದೇಶಿಯರ ಆಳ್ವಿಕೆಯಲ್ಲಿ ಇದ್ದುದರಿಂದ ಆ ಪ್ರದೇಶದ ಶಿಲ್ಪಕಲೆಯ ಮೇಲೆ ವಿದೇಶಿ ಪ್ರಭಾವ ಹೆಚ್ಚಾಗಿತ್ತು. ಇದು ಕುಶಾನರು, ಬ್ಯಾಕ್ಟ್ರಿಯನ್ ಮತ್ತು ಪಾರ್ಥಿಯನ್ನರ ಕಾಲದಲ್ಲಿ ಹೆಚ್ಚು ಬೆಳವಣಿಗೆ ಹೊಂದಿತ್ತು. ಈ ಕಲೆಯನ್ನು ಗ್ರೀಕೋ–ಬೌದ್ಧ ಇಂಡೋ–ಗ್ರೀಕ್ ಮತ್ತು ಗ್ರೀಕೋ–ರೋಮನ್ ಶಿಲ್ಪಕಲೆಯೆಂದೂ ಕರೆಯುತ್ತಾರೆ. ತಕ್ಷಶಿಲೆಯ ಸುತ್ತಮುತ್ತ ಮತ್ತು ಅಫ್ಘಾನಿಸ್ತಾನ, ಪಶ್ಚಿಮ ಪಾಕಿಸ್ತಾನದ ಅನೇಕ ಪ್ರಾಚೀನ ನವೇಶನಗಳಲ್ಲಿ ಗಾಂಧಾರ ಕಲಾಕೃತಿಗಳು ದೊರೆತಿವೆ.

### ತಜ್ಞರ ಅಭಿಪ್ರಾಯ

ಯುರೋಪಿನ ವಿದ್ವಾಂಸರು ಭಾರತದ ಕಲಾಕ್ಷೇತ್ರದಲ್ಲಿ ಗಾಂಧಾರ ಕಲೆ ಅತ್ಯಂತ ಪ್ರಮುಖವಾದುದು ಎಂದು ಅಭಿಪ್ರಾಯಪಟ್ಟಿದ್ದರು. ಇಂದಿಗೂ ಅನೇಕರು ಭಾರತದ ಮತ್ತು ದೂರ ಪ್ರಾಚ್ಯಗಳ ಉತ್ತರೋತ್ತರ ಕಲಾಭಿವೃದ್ಧಿಗೆ ಗಾಂಧಾರ ಕಲೆಯೇ ಮೂಲವೆಂದು ಹೇಳುತ್ತಾರೆ.

### ಪ್ರಭಾವ

ಗಾಂಧಾರ ಶಿಲ್ಪಕಲೆಯ ಈ ವಿಶೇಷ ಲಕ್ಷಣಗಳು ಗ್ರೀಕ್ ಕಲೆಯಿಂದ ಅದರಲ್ಲೂ ಏಷ್ಯಾ ಮೈನರ್ ಮತ್ತು ರೋಮನ್ ಸಾಮ್ರಾಜ್ಯದ ಹೆಲೆನಿಸ್ಟಿಕ್ ಕಲೆಯಿಂದ ಬಂದಿದೆ. ಹಾಗಾಗಿಯೇ ಇದನ್ನು ಇಂಡೋ–ಗ್ರೀಕ್ ಅಥವಾ ಗ್ರೀಕೋ–ರೋಮನ್ ಕಲೆಯೆಂದು ಹೇಳುತ್ತಾರೆ. ಈ ಕಲೆಗೆ ಶಿಲ್ಪ ತಂತ್ರವನ್ನು ಗ್ರೀಕ್ ದೇಶದಿಂದ ಪಡೆದುಕೊಂಡಿದ್ದರೂ, ಅದರ ಪ್ರಸಾರಕ್ಕೆ ಬೌದ್ಧರ ನಂಬಿಕೆ ಮತ್ತು ಆಚರಣೆಗಳನ್ನು ಮಾತ್ರವೇ ಬಳಸಿಕೊಳ್ಳಲಾಗಿದೆ. ಆದ್ದರಿಂದ ಈ ಕಲೆಯಲ್ಲಿ ಗ್ರೀಕ್ ಮತ್ತು ಭಾರತೀಯ ಪ್ರಭಾವ ಹೆಚ್ಚಿದೆ. ಕಾನಿಷ್ಕನ ಕಾಲದಲ್ಲಿ ಗಾಂಧಾರ ಕಲೆ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಇದಕ್ಕೆ ಸಾಕ್ಷಿ ಸಾಂಚಿ ಮತ್ತು ಬಾರಹಾತ್‌ಗಳಂಥ ಸ್ಥಳಗಳಲ್ಲಿನ ಭವ್ಯವಾದ ಹಾಗೂ ವೈವಿಧ್ಯದಿಂದ ಕೂಡಿದ ಗಾಂಧಾರ ಶಿಲ್ಪಕಲೆಗಳು, ನಂತರ ಕಾಲಘಟ್ಟದಲ್ಲಿ ಗಾಂಧಾರ ಕಲೆ ಕಣ್ಮರೆಯಾದರೂ, ಸಿಥಿಯಾ ರಾಜರ ಹಾಗೂ ಕುಶಾನರ ಮೂಲಕ ಇದು ಚೀನಾ, ತುರ್ಕಿಸ್ಥಾನದ ಮೂಲಕ ದೂರ ಪ್ರಾಚ್ಯಕ್ಕೂ, ಜಪಾನ್‌ಗೂ ಪಸರಿಸಿತು.

### ಲಕ್ಷಣಗಳು :

- ಗಾಂಧಾರ ಶಿಲ್ಪಕಲೆಯು ಕೆಲವು ತಾಂತ್ರಿಕ ಲಕ್ಷಣಗಳನ್ನು ಹೊಂದಿರುವುದರಿಂದ ಇವುಗಳನ್ನು ಬೇಗನೆ ಗುರುತಿಸಬಹುದು. ಮೊದಲನೆಯ ಲಕ್ಷಣವೆಂದರೆ, ಗಾಂಧಾರ ಕಲೆಯಲ್ಲಿ ಮೂರ್ತಿಯ ದೈಹಿಕ ಅಂಗರಚನೆ ಅದರಲ್ಲಿಯೂ ಉಬ್ಬಿದ ಮಾಂಸಖಂಡ, ಮೀಸೆ ಮುಂತಾದವುಗಳಿಗೆ ಹೆಚ್ಚಿನ ಗಮನ ನೀಡಲಾಗಿದೆ.
- ಶಿಲ್ಪದಲ್ಲಿ ದಪ್ಪ ವಸ್ತ್ರಗಳನ್ನು ಒತ್ತಾದ ಮಡಿಕೆಗಳನ್ನು ಅಥವಾ ನೆರಿಗೆಯನ್ನು ನುಲಿಯುವುದರ ಬಗ್ಗೆ ಹೆಚ್ಚುಗಮನ ನೀಡಲಾಗಿದೆ.
- ಭಾರತದ ಇತರೆ ಶಿಲ್ಪಕಲೆಗಳಲ್ಲಿ ಮಾನವರ ವಿಗ್ರಹಗಳಿಗೆ ಪಾರದರ್ಶಕವಾದ ಮತ್ತು ದೇಹಕ್ಕೆ ಬಿಗಿಯಾಗಿ ಅಂಟಿಕೊಂಡು ದೇಹದ ರೂಪುರೇಷೆಗಳನ್ನು ತೋರಿಸುವಂತಿರುವ ಉಡುಗೆಗಳನ್ನು ಧರಿಸಿರುವಂತೆ ಕೆತ್ತಲಾಗಿದೆ. ಆದರೆ, ಗಾಂಧಾರ ಕಲೆಯಲ್ಲಿ ವಿಗ್ರಹಕ್ಕೆ ಶ್ರೀಮಂತ ಆಭರಣಗಳು ಮತ್ತು ಉಡುಪುಗಳನ್ನು ಧರಿಸಿದಂತೆ ಕೆತ್ತಲಾಗಿದೆ.
- ಗಾಂಧಾರ ಬುದ್ಧನ ಪ್ರತಿಮೆಗಳಲ್ಲಿ ವಿಗ್ರಹದ ದೈಹಿಕ ಸೌಂದರ್ಯಕ್ಕೆ ಆದ್ಯತೆ ನೀಡಿದರೆ, ಇತರೆ ಶಿಲ್ಪಕಲೆಗಳಲ್ಲಿ ಬುದ್ಧನ ವಿಗ್ರಹಕ್ಕೆ ಪ್ರಶಾಂತ ಮುದ್ರೆಯನ್ನು ಮತ್ತು ಆಧ್ಯಾತ್ಮಿಕ ಭಾವನೆಯನ್ನು ನೀಡಲು ಹೆಚ್ಚು ಗಮನವಹಿಸಿದ್ದಾರೆ.

**– ಪ್ರೇರಣಾಗೌಡ**

ದ್ವಿತೀಯ ಬಿಸಿಎ ವಿದ್ಯಾರ್ಥಿನಿ



**ವಿಶ್ವವಿಖ್ಯಾತ ಮೈಸೂರು "ದಸರಾ ಜಂಬೂ ಸವಾರಿ–2023"**

**ಸುವರ್ಣ ನ್ಯೂಸ್ ಹಾಗೂ ವಿಸ್ತಾರ ನ್ಯೂಸ್ ಚಾನಲ್‌ಗಳ ವೀಕ್ಷಕ ವಿವರಣೆಯಲ್ಲಿ ಡಾ. ಶ್ರೀಧರ ಹೆಚ್**











# Final Year B.A. Students Participated in Dasara Heritage Walk - 21.10.2023









# Voluteers of Mahajana Corps (VoMC) participated in world Hospice & Palliative care day-2023 organised by Vivekananda Youth Movement & Rotary, Mysuru - 31.10.2023








# BoE Meeting in History - 2023-24 (Odd Semester) held on 27.11.2023





# Remedial Classes (Odd Semester) 2023-24





# Special Lecture: 'History in Competitive Exams'
## Resource Person: Dr. Sreedhara H, HoD of History
## Venue: Sri Adichunchanagiri First Grade College, H.D. Kote - 10.12.2023





ಪ್ರತಿನಿಧಿ
ಪ್ರಾದೇಶಿಕ ದಿನಪತ್ರಿಕೆ
PAGE_2
11 Dec 2023

# ಸ್ಪರ್ಧಾ ಪರೀಕ್ಷೆಗಳು ಉದ್ಯೋಗಕ್ಕೆ ಪೂರಕ

**ಎಚ್.ಡಿ.ಕೋಟೆ:** ಸ್ಪರ್ಧಾತ್ಮಕ ಜಗತ್ತಿನಲ್ಲಿ ಸ್ಪರ್ಧಾ ಪರೀಕ್ಷೆಗಳಿಲ್ಲದೆ ಯಾವುದೇ ಉದ್ಯೋಗ ಪಡೆಯಲು ಸಾಧ್ಯವೇ ಇಲ್ಲ ಎಂದು ಮೈಸೂರು ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಡಾ.ಶ್ರೀಧರ್ ತಿಳಿಸಿದರು.

ಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸ್ಪರ್ದಾತ್ಮಕ ಪರೀಕ್ಷೆಗಳಲ್ಲಿ ಇತಿಹಾಸ ಎಂಬ ವಿಚಾರ ಸಂಕಿರಣದಲ್ಲಿ ಮಾತನಾಡಿದರು. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸಾಧನೆ ಮಾಡಬೇಕಾದರೆ, ಸಾಮಾನ್ಯ ಜ್ಞಾನ ಸಂಪಾದಿಸಬೇಕು. ಮಾನಸಿಕವಾಗಿ ಸಿದ್ಧತೆ ಮಾಡಿಕೊಳ್ಳಬೇಕು. ಪೈಪೋಟಿ ಕೊಡಬೇಕು. ಮದ್ಯವ್ಯಸನ, ಧೂಮಪಾನದಂಥ ಕೆಟ್ಟ ಚಟಗಳನ್ನು ಮಾಡಿಕೊಳ್ಳಬಾರದು. ಧನಾತ್ಮಕ ಆಲೋಚನೆ ಗಳನ್ನು ಬೆಳೆಸಿಕೊಳ್ಳಬೇಕು ಎಂದರು.

ಪರೀಕ್ಷೆಗಳಲ್ಲಿ ಕೊಡುವ 100 ಅಂಕದ ಪ್ರಶ್ನೆಗಳಲ್ಲಿ ಸಾಮಾನ್ಯ ಜ್ಞಾನ, ಐಚ್ಛಿಕ ವಿಷಯ, ಇತಿಹಾಸ, ಅರ್ಥಶಾಸ್ತ್ರ, ಭೂಗೋಳಶಾಸ್ತ್ರ, ಜೀವಶಾಸ್ತ್ರ, ಭೌತಶಾಸ್ತ್ರ, ಪರಿಸರ ಅಧ್ಯಯನ, ಪರಿಸರ ವಿಜ್ಞಾನ, ಮಾನಸಿಕ ಶಕ್ತಿ ಪರೀಕ್ಷೆಗೆ ಸಂಬಂದಿಸಿದಂತೆ ಪ್ರಶ್ನೆಗಳು ಇರುತ್ತವೆ.

ಪ್ರಚಲಿತ ವಿದ್ಯಾಮಾನಗಳ ಬಗ್ಗೆ ಶೇ.60 ರಷ್ಟು ಪ್ರಶ್ನೆಗಳು ಇರುತ್ತದೆ. ಹಾಗಾಗಿ ದಿನ ನಿತ್ಯ ದಿನ ಪತ್ರಿಕೆಗಳನ್ನು ಓದುವ ಅಭ್ಯಾಸ ಮಾಡಿಕೊಳ್ಳಬೇಕು. ದಿನ ಪತ್ರಿಕೆಗಳಲ್ಲಿ ಕಾಣುವ ಮುಖ್ಯ ವಿಷಯಗಳನ್ನು ಟಿಪ್ಪಣಿ ಮಾಡಿಕೊಳ್ಳಬೇಕು. ಇಂಗ್ಲಿಷ್ ಭಾಷೆ ಕಲಿಯಬೇಕು ಎಂದರು.

ಪ್ರಾಂಶುಪಾಲ ಜೆ.ಎನ್. ವೆಂಕಟೇಶ್, ಇತಿಹಾಸ ಪ್ರಾಧ್ಯಾಪಕ ರಾಮಚಂದ್ರ, ಮಹೇಂದ್ರ, ಸಂಸ್ಥೆಯ ದೈಹಿಕ ಶಿಕ್ಷಣ ನಿರ್ದೇಶಕ ಕಲ್ಲೇಶ್ ಗೌಡ, ಪತ್ರಕರ್ತ ಸತೀಶ್ ಆರಾಧ್ಯ, ಗ್ರಂಥಪಾಲಕ ಸಿದ್ದರಾಜು ಹಾಜರಿದ್ದರು.



ಎಚ್.ಡಿ. ಕೋಟೆ ಪಟ್ಟಣದ ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ನಡೆದ ವಿಚಾರ ಸಂಕಿರಣವನ್ನು ನಡೆಸಿಕೊಟ್ಟ ಮೈಸೂರು ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಡಾ. ಶ್ರೀಧರ್ ಅವರನ್ನು ಅಭಿನಂದಿಸಲಾಯಿತು.